# ಸಮಾಜ ವಿಜ್ಞಾನ ಎಸ್.ಟಿ.ಎಫ್. ಡಿಜಿಟಲ್ ಗ್ರೂಪ್

ರಚನೆ
ಸಂತೋಷ್ ಕುಮಾರ್ ಸಿ.
ಸರ್ಕಾರಿ ಪ್ರೌಢಶಾಲೆ ಬನ್ನಿಕಲ್ಲು
ಹಗರಿ ಬೊಮ್ಮನಹಳ್ಳಿ ಬಳ್ಳಾರಿ.

# ಮಿಷನ್ 28

MISSION MISSION MISSION MISSION MISSION MISSION MISSION

## 10ನೇ ತರಗತಿ



ಯಶಸ್ಸಿನೆಡೆಗೆ ಮೊದಲ ಹೆಜ್ಜೆ.......

## ಸಮಾಜವಿಜ್ಞಾನ ಪಾಸಿಂಗ್ ಪ್ಯಾಕೇಜ್

ಚಿಕ್ಕ ಚಿಕ್ಕ ಪ್ರಯತ್ನಗಳು ಮೊಡ್ಡ ಯಶಸ್ಸಿನ ಮೂಲವಾಗಿರುತ್ತದೆ. ಯಶಸ್ಸು ನಿಮ್ಮದಾಗಲಿ.

Use E-Papers, Save Tress
Above line hide when print out

# ಮಿಷನ್ – 28

ಆತ್ಮೀಯ ಶಿಕ್ಷಕ ಮಿತ್ರರೇ,

ಎಸ್.ಎಸ್.ಎಲ್.ಸಿ ಸಮಾಜ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ನೂತನ ಪಠ್ಯಕ್ರಮ ಮತ್ತು ಪಠ್ಯಪುಸ್ತಕವನ್ನು ಪ್ರಸ್ತುತ 2018–19ನೇ ಸಾಲಿನಿಂದ ಪರಿಚಯಿಸಲಾಗಿದೆ. ನೂತನ ಪಠ್ಯಕ್ರಮಕ್ಕೆ ಅನುಗುಣವಾಗಿ ಮಕ್ಕಳನ್ನು ಪರೀಕ್ಷೆಗೆ ಸಿದ್ಧಪಡಿಸುವುದು ಶಿಕ್ಷಕರಿಗೆ ಸವಾಲಿನ ವಿಷಯವಾಗಿದೆ. ಅದರಲ್ಲಿಯೂ ಕಲಿಕೆಯಲ್ಲಿ ತೀರಾ ಹಿಂದುಳಿದ ಮಕ್ಕಳವನ್ನು ಉತ್ತೀರ್ಣತೆಯ ಗೆರೆಯನ್ನು ದಾಟುವಂತೆ ಮಾಡುವುದೇ ಶಿಕ್ಷಕರಿಗಿರುವ ಅತಿದೊಡ್ಡ ಸವಾಲೆಂದರೆ ತಪ್ಪಾಗಲಾರದು. ಇಂತಹ ಕಲಿಕೆಯಲ್ಲಿ ತುಂಬಾ ಹಿಂದುಳಿದಿರುವ ಮಕ್ಕಳನ್ನು ಪರೀಕ್ಷೆಗೆ ಸಿದ್ಧಗೊಳಿಸಲು ಅನೇಕ ತಂತ್ರಗಳನ್ನು ಅನುಸರಿಸಬೇಕಾಗುತ್ತದೆ. ಈ ತಂತ್ರಗಳ ಒಂದು ಭಾಗವೇ 'ಮಿಷನ್ – 28' ಎಂಬ ಈ ಪಾಸಿಂಗ್ ಪ್ಯಾಕೇಜ್.

ಈ ಬಾರಿ ಇಲಾಖೆಯಿಂದ ಅಧಿಕೃತವಾಗಿ ಯಾವುದೇ ನೀಲನಕ್ಷೆಯನ್ನು ಬಿಡುಗಡೆ ಮಾಡಿರುವುದಿಲ್ಲ. ಆದರೆ ಇಲಾಖೆ ಬಿಡುಗಡೆ ಮಾಡಿರುವ ಪ್ರತಿ ಪಾಠಕ್ಕೆ ನಿಗದಿತ ಅಂಕಗಳು ಮತ್ತು ಮಾದರಿ ಪ್ರಶ್ನೆ ಪತ್ರಿಕೆಯನ್ನು ವಿಶ್ಲೇಷಣೆಗೆ ಒಳಪಡಿಸಿ ಈ ಪಾಸಿಂಗ್ ಪ್ಯಾಕೇಜನ್ನು ತಯಾರಿಸಲಾಗಿದೆ. ನಿಧಾನಗತಿಯ ಮಕ್ಕಳಿಗೆ ಸಹಕಾರಿಯಾಗಲೆಂದು ಅತಿ ಸುಲಭವಾದ ಘಟಕಗಳನ್ನು ಆಯ್ದುಕೊಂಡು, ಅದರಲ್ಲಿ ಬರುವ ಬಹುನಿರೀಕ್ಷಿತ ಪ್ರಶ್ನೋತ್ತರಗಳನ್ನು ನೀಡಲಾಗಿದೆ. ಮಕ್ಕಳ ಕಲಿಕೆಗೆ ಸಹಾಯವಾಗಲೆಂದು ಪ್ರತಿ ಪ್ರಶ್ನೆಗೆ ಬುಲೆಟ್ ಪಾಯಿಂಟ್ ರೂಪದಲ್ಲಿ ಅತ್ಯಂತ ಸರಳ ಉತ್ತರಗಳನ್ನು ನೀಡಲಾಗಿದೆ. ಒಂದು ಅಂಕ, ಎರಡು ಅಂಕ, ಮೂರು ಅಂಕ, ನಾಲ್ಕು ಅಂಕ ಮತ್ತು ನಕ್ಷೆ ಹೀಗೆ ಎಲ್ಲಾ ಆಯಾಮಗಳನ್ನು ಗಮನದಲ್ಲಿಟ್ಟುಕೊಂಡು ಈ ಪಾಸಿಂಗ್ ಪ್ಯಾಕೇಜನ್ನು ತಯಾರಿಸಲಾಗಿದೆ. ಈ ಪಾಸಿಂಗ್ ಪ್ಯಾಕೇಜ್ ಮಕ್ಕಳ ಕಲಿಕೆಯನ್ನು ಸುಲಭಗೊಳಿಸಿ ಪರೀಕ್ಷೆಗೆ ಸಹಕಾರಿಯಾಗಬೇಕಾದರೆ ಶಿಕ್ಷಕರು ಪ್ರತಿ ಉತ್ತರಕ್ಕೂ ಕೇಳಬಹುದಾದ ವಿಭಿನ್ನ ಸ್ವರೂಪದ ಪ್ರಶ್ನೆಗಳನ್ನು ಪರಿಚಯಿಸಬೇಕಾದ ಅಗತ್ಯವಿದೆ. ಆಗ ಮಾತ್ರ ನಿರೀಕ್ಷಿತ ಪ್ರಮಾಣದಲ್ಲಿ ಯಶಸ್ಸನ್ನು ಗಳಿಸಬಹುದಾಗಿದೆ.

ಕಳೆದ ಬಾರಿಯು ಕೇವಲ ಎಂಟು ಪುಟಗಳಲ್ಲಿ ತಯಾರಿಸಿದ್ದ 'ಮಿಷನ್ – 28'ಯಿಂದ ಪರೀಕ್ಷೆಯಲ್ಲಿ 41 ಅಂಕಗಳನ್ನು ಗಳಿಸಲು ಸಾಧ್ಯವಾಗಿತ್ತು. ಈ ಬಾರಿಯೂ ಅದೇ ನಿರೀಕ್ಷೆಯೊಂದಿಗೆ ಈ ಪಾಸಿಂಗ್ ಪ್ಯಾಕೇಜನ್ನು ತಯಾರಿಸಲಾಗಿದೆ. ಈ ಪಾಸಿಂಗ್ ಪ್ಯಾಕೇಜ್ ನ ರಚನೆಯ ಹಂತದಲ್ಲಿ ತಾಳ್ಮೆಯಿಂದ ನನ್ನೊಂದಿಗೆ ಸಹಕರಿಸಿದ ಶ್ರೀಯುತ ಮಹದೇವಪ್ಪ ಕುಂದರಗಿಯವರಿಗೆ ಹಾಗೂ ಅಂದವಾದ ಮುಖಪುಟ ಮಾಡಿಕೊಟ್ಟ ಶ್ರೀಯುತ ಕೆ.ಎಸ್. ರಾಮಚಂದ್ರಪ್ಪನವರಿಗೂ ಹೃತ್ಪೂರ್ವಕ ಧನ್ಯವಾದಗಳು.

ಇಂತಿ

ಸಂತೋಷ್ ಕುಮಾರ್ .ಪಿ

ಮೊ: 9742534454

<table>
<tr><th colspan="4">ಘಟಕಗಳು ಪ್ರಥಮ ಸ್ವಾತಂತ್ರ್ಯ ಸಂಗ್ರಾಮ, ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ, ಭಾರತದ ಮೇಲ್ಮೈ ಲಕ್ಷಣಗಳು (ನಿರೀಕ್ಷಿತ ಅಂಕಗಳು 4 ರಿಂದ 6)</th></tr>
<tr><td>1857ರ ದಂಗೆಗೆ ರಾಜಕೀಯ ಕಾರಣಗಳು</td><td>1857ರ ದಂಗೆಗೆ ಆರ್ಥಿಕ ಕಾರಣಗಳು</td><td>1857ರ ದಂಗೆಗೆ ಆಡಳಿತಾತ್ಮಕ ಕಾರಣಗಳು</td><td>1857ರ ದಂಗೆಗೆ ಸೈನಿಕ ಕಾರಣಗಳು</td></tr>
<tr><td>❖ ದತ್ತು ಮಕ್ಕಳಿಗೆ ಹಕ್ಕಿಲ್ಲ ಪದ್ಧತಿ<br>❖ ತಂಜಾವೂರು ಮತ್ತು ಆರ್ಕಾಟ್ ನವಾಬರ ರಾಜಪದವಿ ರದ್ಧತಿ<br>❖ ಮೊಘಲ್ ದೊರೆ&ಅವದ್ ನವಾಬನ ಪದಚ್ಯುತಿ<br>❖ ಅಧಿಕಾರ ಕಳೆದಕೊಂಡ ರಾಜರ ಅಸಮಾಧಾನ</td><td>❖ ಇಂಗ್ಲೆಂಡಿನಲ್ಲಾದ ಕೈಗಾರಿಕಾ ಕ್ರಾಂತಿ<br>❖ ಭಾರತೀಯ ವಸ್ತುಗಳ ಮೇಲಿನ ಅಧಿಕ ತೆರಿಗೆ<br>❖ ಭಾರತೀಯ ಗೃಹ ಕೈಗಾರಿಕೆಗಳ ಅವನತಿ<br>❖ ಲಕ್ಷಾಂತರ ಕಾರ್ಮಿಕ ನಿರುದ್ಯೋಗ<br>❖ ಕಂದಾಯಕ್ಕಾಗಿ ರೈತರ ಶೋಷಣೆ</td><td>❖ ಬ್ರಿಟಿಷರು ತಂದ ಹೊಸ ಕಾನೂನುಗಳು<br>❖ ಪಕ್ಷಪಾತದಿಂದ ಕೂಡಿದ್ದ ಕಾನೂನುಗಳು<br>❖ ಇಂಗ್ಲೀಷ್ ನ್ಯಾಯಾಲಯದ ಭಾಷೆಯಾದುದು<br>❖ ಇಂಗ್ಲೀಷರ ಪರವಾಗಿರುತ್ತಿದ್ದ ತೀರ್ಪುಗಳು<br>❖ ಕಾನೂನಿನ ಆಶಯ ಜನರಿಗೆ ಅರ್ಥವಾಗಲಿಲ್ಲ</td><td>❖ ಸಾಗರೋತ್ತರ ಸೇವೆಗೆ ಸೈನಿಕರ ಒತ್ತಾಯ<br>❖ ಭಾರತೀಯ ಸೈನಿಕರ ಶೋಚನೀಯ ಸ್ಥಿತಿ<br>❖ ವೇತನ, ಬಡ್ತಿಯಲ್ಲಿ ಸೈನಿಕರಿಗೆ ತಾರತಮ್ಯ<br>❖ ಬ್ರಿಟಿಷ್ ವಶವಾದ ರಾಜ್ಯಗಳ ಸೈನಿಕರ ನಿರುದ್ಯೋಗ</td></tr>
<tr><td>1857ರ ದಂಗೆಯ ವಿಫಲತೆಗೆ ಕಾರಣಗಳು</td><td>1857ರ ದಂಗೆಯ ಪರಿಣಾಮಗಳು</td><td>ಅನ್ಯರಾಷ್ಟ್ರಗಳೊಂದಿಗೆ ಉತ್ತಮ ಭಾಂದವ್ಯದ ಅಗತ್ಯತೆ</td><td>ಭಾರತ ಮತ್ತು ಚೀನಾ ನಡುವಿನ ಭಾಂದವ್ಯಕ್ಕೆ ಅಡ್ಡಿಯಾಗಿರುವ ಅಂಶಗಳು</td></tr>
<tr><td>❖ ದಂಗೆ ಭಾರತದಾದ್ಯಂತ ವ್ಯಾಪಿಸಿರಲಿಲ್ಲ<br>❖ ದೇಶೀಯ ರಾಜರಿಂದ ಬ್ರಿಟಿಷರಿಗೆ ನಿಷ್ಠೆ<br>❖ ಸೂಕ್ತ ಯೋಜನೆಯ ಕೊರತೆ<br>❖ ಸೂಕ್ತ ನಾಯಕತ್ವದ ಕೊರತೆ<br>❖ ಶಸ್ತ್ರಾಸ್ತ್ರಗಳ ಕೊರತೆ</td><td>❖ ಕಂಪನಿಯ ಆಡಳಿತ ಅಂತ್ಯ<br>❖ ರಾಣಿಯ ನೇರ ಆಡಳಿತ ಆರಂಭ<br>❖ ಉತ್ತಮ ಆಡಳಿತದ ಭರವಸೆ<br>❖ ಸ್ವಾತಂತ್ರ್ಯ ಹೋರಾಟಕ್ಕೆ ದಿಕ್ಸೂಚಿ<br>❖ ಹೋರಾಟಕ್ಕೆ ಪರ್ಯಾಯಮಾರ್ಗದ ಅನ್ವೇಷಣೆ</td><td>❖ ರಾಷ್ಟ್ರೀಯ ಹಿತಾಸಕ್ತಿಗಳು<br>❖ ಗಡಿ ಭದ್ರತೆ<br>❖ ವಿದೇಶ ವ್ಯಾಪಾರ<br>❖ ಆರ್ಥಿಕ ಲಾಭ<br>❖ ರಾಷ್ಟ್ರದ ಗೌರವ</td><td>❖ ಟಿಬೆಟ್ ವಿವಾದ<br>❖ 1962ರ ಭಾರತ ಮತ್ತು ಚೀನಾ ಯುದ್ಧ<br>❖ ಗಡಿ ವಿವಾದ<br>❖ ಅರುಣಾಚಲ ಪ್ರದೇಶ ತನ್ನದೆನ್ನುತ್ತಿರುವ ಚೀನಾ</td></tr>
<tr><td>ಭಾರತ ಮತ್ತು ಚೀನಾ ದೇಶಗಳು ಸಂಬಂಧ ಸುಧಾರಣೆಗೆ ಕೈಗೊಂಡ ಕ್ರಮಗಳು</td><td>ಭಾರತ ಮತ್ತು ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾಗಿರುವ ಅಂಶಗಳು</td><td>ಭಾರತ ಮತ್ತು ಪಾಕಿಸ್ತಾನ ದೇಶಗಳು ಸಂಬಂಧ ಸುಧಾರಣೆಗೆ ಕೈಗೊಂಡ ಕ್ರಮಗಳು</td><td>ರಷ್ಯಾ ಮತ್ತು ಭಾರತ ದೇಶಗಳ ಸಂಬಂಧ</td></tr>
<tr><td>❖ ಪಂಚಶೀಲ ತತ್ವಗಳು<br>❖ ದ್ವಿಪಕ್ಷೀಯ ರಾಯಭಾರಿ ಸಂಬಂಧಗಳು<br>❖ ದೊಡ್ಡಮಟ್ಟದ ವ್ಯಾಪಾರ ಸಂಬಂಧ<br>❖ ಬ್ರಿಕ್ಸ್ ಒಕ್ಕೂಟ ರಚನೆ</td><td>❖ ಜಮ್ಮು–ಕಾಶ್ಮೀರ ಸಮಸ್ಯೆ<br>❖ ಭಯೋತ್ಪಾದನೆ<br>❖ ನೀರಿನ ಹಂಚಿಕೆ ವಿವಾದಗಳು<br>❖ ಇಂಡೋ ಪಾಕ್ ಯುದ್ಧಗಳು</td><td>❖ ತಾಷ್ಕೆಂಟ್ ಒಪ್ಪಂದ<br>❖ ಸಿಮ್ಲಾ ಒಪ್ಪಂದ<br>❖ ಲಾಹೋರ್ ಬಸ್ ಯಾತ್ರೆ<br>❖ ಆಗ್ರಾ ಶೃಂಗಸಭೆ</td><td>❖ ತಾಷ್ಕೆಂಟ್ ಒಪ್ಪಂದಕ್ಕೆ ಸಹಕಾರ<br>❖ 20ವರ್ಷಗಳ ಮೈತ್ರಿ ಒಪ್ಪಂದ<br>❖ ಚೀನಾ ಆಕ್ರಮಣವನ್ನು ಖಂಡನೆ<br>❖ ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ಸಹಕಾರ<br>❖ ವಾಣಿಜ್ಯ ಬೆಳವಣಿಗೆಗೆ ನೆರವು</td></tr>
<tr><td>ಭಾರತ ಮತ್ತು ಅಮೇರಿಕಾ ದೇಶಗಳ ಸಂಬಂಧ</td><td>ಭಾರತದ ನಾಲ್ಕು ಪ್ರಾಕೃತಿಕ ವಿಭಾಗಗಳು</td><td>ಉತ್ತರ ಪರ್ವತ/ಪರ್ಯಾಯ ಪ್ರಸ್ಥಭೂಮಿ ಮಹತ್ವ</td><td>ಉತ್ತರದ ಮೈದಾನ/ಕರಾವಳಿ ಮೈದಾನದ ಮಹತ್ವ</td></tr>
<tr><td>❖ ಎರಡು ಬೃಹತ್ ಪ್ರಜಾತಂತ್ರ ರಾಷ್ಟ್ರಗಳು<br>❖ ಪಂಚವಾರ್ಷಿಕ ಯೋಜನೆಗಳಿಗೆ ಸಹಾಯ<br>❖ ವ್ಯಾಪಾರ, ವಿಜ್ಞಾನ ಕೇತ್ರದಲ್ಲಿ ಉತ್ತಮ ಬಾಂಧವ್ಯ<br>❖ ಬಾಹ್ಯಾಕಾಶ, ಶಿಕ್ಷಣಕ್ಷೇತ್ರಗಳಲ್ಲಿ ಉತ್ತಮ ಬಾಂಧವ್ಯ</td><td>❖ ಉತ್ತರದ ಪರ್ವತಗಳು.<br>❖ ಉತ್ತರದ ಮೈದಾನಗಳು.<br>❖ ಪರ್ಯಾಯ ಪ್ರಸ್ಥಭೂಮಿ.<br>❖ ಕರಾವಳಿ ಮೈದಾನ ಮತ್ತು ದ್ವೀಪಗಳು.</td><td>❖ ಹಲವು ನದಿಗಳ ಉಗಮ ಸ್ಥಾನ<br>❖ ಹಲವು ಗಿರಿಧಾಮಗಳಿವೆ<br>❖ ಖನಿಜಗಳ ಉಗ್ರಾಣಗಳಾಗಿವೆ<br>❖ ಜಲ ವಿದ್ಯಚ್ಛಕ್ತಿ ತಯಾರಿಕೆಗೆ ಉಪಯುಕ್ತ</td><td>❖ ಕೃಷಿಗೆ ಉಪಯುಕ್ತ<br>❖ ಸಾರಿಗೆ ಮತ್ತು ಸಂಪರ್ಕ ಅಭಿವೃದ್ಧಿ<br>❖ ವ್ಯಾಪಾರಾಭಿವೃದ್ಧಿ<br>❖ ಕೈಗಾರಿಕಾಭಿವೃದ್ಧಿ</td></tr>
<tr><td colspan="2">❖ ದ್ವಿಪ್ರಭುತ್ವ ಸರ್ಕಾರ– ರಾಜ್ಯಾಡಳಿತ ನವಾಬನಿಗೆ ಮತ್ತು ದಿವಾನಿಹಕ್ಕು ಬ್ರಿಟಿಷರಿಗೆ ಸೇರಿತ್ತು.<br>❖ ಸಹಾಯಕ ಸೈನ್ಯ ಪದ್ಧತಿ – ಬ್ರಿಟಿಷರು ಮತ್ತು ದೇಶೀಯ ರಾಜರ ನಡುವಿನ ಸೈನಿಕ ಒಪ್ಪಂದ<br>❖ ದತ್ತು ಮಕ್ಕಳಿಗೆ ಹಕ್ಕಿಲ್ಲ – ರಾಜನು ಮಕ್ಕಳಿಲ್ಲದೆ ಮೃತನಾದರೆ, ಅವನ ದತ್ತು ಪುತ್ರನಿಗೆ ಉತ್ತರಾಧಿಕಾರವಿಲ್ಲ<br>❖ ಖಾಯಂ ಜಮೀನ್ದಾರಿ ಪದ್ಧತಿ – ಜಮೀನ್ದಾರರು ಭೂಮಾಲೀಕರಾಗಿದ್ದು ತೆರಿಗ ವಸೂಲಿ ಮಾಡುತ್ತಿದ್ದರು.<br>❖ ರೈತವಾರಿ ಪದ್ಧತಿ – ರೈತರು ಭೂಮಾಲೀಕರಾಗಿದ್ದು, ರೈತರೇ ತೆರಿಗೆಯನ್ನು ಸರ್ಕಾರಕ್ಕೆ ಸಲ್ಲಿಸುತ್ತಿದ್ದ ಪದ್ಧತಿ.<br>❖ ಪಾಲಿಸಿ ಆಫ್ ಅಸರ್ಷನ್ – ಶಾಸನ ರೂಪಿಸುವ ಪ್ರಕ್ರಿಯೆಯಲ್ಲಿ ಭಾರತೀಯರನ್ನು ತೊಡಗಿಸಿಕೊಳ್ಳುವುದು.<br>❖ ಹೊಲೊಕಾಸ್ಟ್ – ಹಿಟ್ಲರ್ ನಡೆಸಿದ ಸಾಮೂಹಿಕ ಕಗ್ಗೊಲೆ.<br>❖ ಶೀತಲ ಸಮರ – ಎರಡು ಶಕ್ತಿ ಬಣಗಳ ನಡುವಿನ ಅಘೋಷಿತ ಸಮರ.<br>❖ ಕೋಮುವಾದ – ಅನ್ಯಧರ್ಮಗಳ ಬಗ್ಗೆ ಸೈರಣೆ ಇಲ್ಲದಿರುವುದು.</td><td colspan="2">❖ ಏಕ್ಸ್-ಲಾ- ಚಾಪೆಲ್ ಒಪ್ಪಂದ – 1ನೇ ಕಾರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿತು.<br>❖ ಪಾಂಡಿಚೇರಿ ಒಪ್ಪಂದ – 2ನೇ ಕಾರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿತು.<br>❖ ಪ್ಯಾರಿಸ್ ಒಪ್ಪಂದ – 3ನೇ ಕಾರ್ನಾಟಿಕ್ ಯುದ್ಧವನ್ನು ಅಂತ್ಯಗೊಳಿಸಿತು.<br>❖ ಸಾಲ್ಬಾಯ್ ಒಪ್ಪಂದ – 1ನೇ ಆಂಗ್ಲೋ ಮರಾಠ ಯುದ್ಧವನ್ನು ಅಂತ್ಯಗೊಳಿಸಿತು.<br>❖ ಬೆಸ್ಸಿನ್ ಒಪ್ಪಂದ – ಪೇಶ್ವೆ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟನು.<br>❖ ಮದ್ರಾಸ್ ಒಪ್ಪಂದ – 1ನೇ ಆಂಗ್ಲೋ ಮೈಸೂರು ಯುದ್ಧವನ್ನು ಅಂತ್ಯಗೊಳಿಸಿತು.<br>❖ ಮಂಗಳೂರು ಒಪ್ಪಂದ – 2ನೇ ಆಂಗ್ಲೋ ಮೈಸೂರು ಯುದ್ಧವನ್ನು ಅಂತ್ಯಗೊಳಿಸಿತು.<br>❖ ಶ್ರೀರಂಗಪಟ್ಟಣ ಒಪ್ಪಂದ – 3ನೇ ಆಂಗ್ಲೋ ಮೈಸೂರು ಯುದ್ಧವನ್ನು ಅಂತ್ಯಗೊಳಿಸಿತು.</td></tr>
</table>

Use E-Papers, Save Tress
Above line hide when print out

| ಘಟಕಗಳು 20ನೇ ಶತಮಾನದ ರಾಜಕೀಯ ಆಯಾಮ, ಭಾರತದ ಸಾರಿಗೆ & ಸಂಪರ್ಕ, ಜಲಸಂಪನ್ಮೂಲ (ನಿರೀಕ್ಷಿತ ಅಂಕಗಳು 4 ರಿಂದ 6) | | | |
|---|---|---|---|
| **ಪ್ರಥಮ ಮಹಾಯುದ್ಧಕ್ಕೆ ಕಾರಣಗಳೇನು?**<br>❖ ಅತಿಯಾದ ಮಿಲಿಟರೀಕರಣ<br>❖ ಅತಿಯಾದ ರಾಷ್ಟ್ರೀಯತೆ<br>❖ ಮೈತ್ರಿಕೂಟಗಳ ರಚನೆ | **ಎರಡನೇ ಮಹಾಯುದ್ಧಕ್ಕೆ ಕಾರಣಗಳಾವುವು?**<br>❖ ರೋಮ್-ಬರ್ಲಿನ್-ಟೋಕಿಯೋ ಒಪ್ಪಂದ<br>❖ ರಾಷ್ಟ್ರಸಂಘದ ವಿಫಲತೆ<br>❖ ಸರ್ವಾಧಿಕಾರಿಗಳ ವಿಸ್ತರಣಾ ನೀತಿ | **2ನೇ ಮಹಾಯುದ್ಧದ ಪರಿಣಾಮಗಳಾವುವು?**<br>❖ ಅಪಾರ ಸಾವು-ನೋವು ಉಂಟಾಯಿತು.<br>❖ ವಿಶ್ವಸಂಸ್ಥೆಯ ಸ್ಥಾಪನೆ.<br>❖ ಶೀತಲ ಸಮರದ ಆರಂಭ | **1930ರ ಮಹಾಆರ್ಥಿಕ ಕುಸಿತದ ಪರಿಣಾಮ**<br>❖ ತೀವ್ರ ಆರ್ಥಿಕ ಸಂಕಷ್ಟ<br>❖ ಜನರ ಜೀವನ ಮಟ್ಟದಲ್ಲಿ ತೀವ್ರ ಕುಸಿತ<br>❖ ಕೈಗಾರಿಕೆ ಮತ್ತು ಕೃಷಿ ಬೆಳವಣಿಗೆ ಸ್ಥಗಿತ |
| **ಫ್ಯಾಸಿಸ್ಟ್ ವಾದದ ಲಕ್ಷಣಗಳನ್ನು ವಿವರಿಸಿ.**<br>❖ ಉಗ್ರ ರಾಷ್ಟ್ರೀಯತೆ<br>❖ ಪರಕೀಯ ಶಕ್ತಿಗಳ ನಾಶ<br>❖ ಜನಾಂಗೀಯ ಶ್ರೇಷ್ಠತೆ<br>❖ ಸಾಮ್ರಾಜ್ಯವಾದದ ವಿಸ್ತರಣೆ | **"ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು" ಹೇಗೆ ವಿವರಿಸಿ.**<br>❖ ಜರ್ಮನ್ ಆರ್ಯ ಜನಾಂಗವೇ ಶ್ರೇಷ್ಠ<br>❖ ಜಗತ್ತನ್ನು ಆಳಲು ಜರ್ಮನ್ನರು ಅರ್ಹರು<br>❖ ಉಗ್ರರಾಷ್ಟ್ರೀಯತೆಯನ್ನು ಪ್ರತಿಪಾದಿಸಿತು. | **ಚೀನಾ ಕ್ರಾಂತಿಯ ಪರಿಣಾಮಗಳಾವುವು?**<br>❖ ಚೀನಾದಲ್ಲಿ ರಾಷ್ಟ್ರೀಯ ಐಕ್ಯತೆ ಉಂಟಾಯಿತು<br>❖ ಪ್ರಬಲ ಕಮ್ಯುನಿಸ್ಟ್ ದೇಶವಾಗಿ ಬೆಳೆಯಿತು<br>❖ ಕೈಗಾರಿಕೆ & ವಿಜ್ಞಾನ ಕ್ಷೇತ್ರದಲ್ಲಿ ಪ್ರಗತಿ<br>❖ ಜನರ ಜೀವನಮಟ್ಟ ಸುಧಾರಿಸಿತು | **ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣೆಗಳು**<br>❖ ರಷ್ಯಾವನ್ನು ಅಮೇರಿಕಾಕ್ಕೆ ಸವಾಲಾಗುವಂತೆ ಮಾಡಿದ<br>❖ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿದ<br>❖ ಮಾನವಸಹಿತ ಉಪಗ್ರಹವನ್ನು ಉಡಾವಣೆ |
| **ಸಾರಿಗೆಯ/ರಸ್ತೆ ಸಾರಿಗೆಯ ಪ್ರಾಮುಖ್ಯತೆ**<br>❖ ಕೃಷಿ & ಕೈಗಾರಿಕಾ ಪ್ರಗತಿಗೆ ಉತ್ತೇಜನ<br>❖ ಮಾರುಕಟ್ಟೆಯ ವಿಸ್ತರಣೆ<br>❖ ಉದ್ಯೋಗ ಸೃಷ್ಟಿ<br>❖ ಪ್ರವಾಸೋದ್ಯಮಕ್ಕೆ ಪ್ರೋತ್ಸಾಹ<br>❖ ರಕ್ಷಣಾ ಪಡೆಗೂ ನೆರವಾಗುತ್ತದೆ. | **ಸಂಪರ್ಕ ಮಾಧ್ಯಮದ ಪ್ರಾಮುಖ್ಯತೆ**<br>❖ ಸರ್ಕಾರದ ನೀತಿ ನಿಯಮಗಳ ಬಗ್ಗೆ ಅರಿವು<br>❖ ನೈಸರ್ಗಿಕ ವಿಪತ್ತುಗಳ ಮುನ್ಸೂಚನೆ<br>❖ ವ್ಯಾಪಾರ, ಕೈಗಾರಿಕೆ, ಕೃಷಿ ಅಭಿವೃದ್ಧಿ<br>❖ ಮನರಂಜನೆ<br>❖ ದೇಶದ ಏಕತೆ ಮತ್ತು ಸಮಗ್ರತೆ ನಿರ್ವಹಣೆ | **ರಸ್ತೆಗಳ ವಿವಿಧ ಪ್ರಕಾರಗಳು**<br>❖ ಸುವರ್ಣ ಚತುಷ್ಕೋನ & ಸೂಪರ್ ಹೆದ್ದಾರಿಗಳು<br>❖ ರಾಷ್ಟ್ರೀಯ ಹೆದ್ದಾರಿಗಳು<br>❖ ರಾಜ್ಯ ಹೆದ್ದಾರಿಗಳು<br>❖ ಜಿಲ್ಲಾ ರಸ್ತೆಗಳು<br>❖ ಗ್ರಾಮೀಣ ರಸ್ತೆಗಳು | **ಕೊಳವೆ ಮಾರ್ಗಗಳ ಕುರಿತು ಬರೆಯಿರಿ.**<br>❖ ಇದು ಹೊಸ ಭೂಸಾರಿಗೆ ವಿಧಾನ<br>❖ ಕೊಳವೆ ಮಾರ್ಗ ನೆಲದೊಳಗೆ ಹಾಸಲಾಗಿರುತ್ತದೆ<br>❖ ಕಚ್ಚಾ ತೈಲ, ನೈಸರ್ಗಿಕ ಅನಿಲಗಳ ಸಾಗಾಣಿಕೆ<br>❖ ಕೆಸರು ರೂಪದಲ್ಲಿ ಖನಿಜಗಳ ಸಾಗಾಣಿಕೆ |
| **ಭಾರತದಲ್ಲಿ ನೀರಾವರಿ ಏಕೆ ಅತ್ಯಾವಶ್ಯಕ?**<br>❖ ಮಾನ್ಸೂನ್ ಮಳೆ ಆಧಾರಿತ ಕೃಷಿ.<br>❖ ಋತುಕಾಲಿಕ & ಅಸಮಾನತೆ ಮಳೆ ಹಂಚಿಕೆ<br>❖ ಕೆಲವು ಬೆಳೆಗಳಿಗೆ ಹೆಚ್ಚಿನ ನೀರು ಅಗತ್ಯ<br>❖ ಅಧಿಕ ಇಳುವರಿ ಮತ್ತು ಉತ್ಪಾದನೆ | **ಬಾವಿ ನೀರಾವರಿಯ ಪ್ರಾಮುಖ್ಯತೆ**<br>❖ ಕಡಿಮೆ ಮಳೆಯಾಗುವ ಪ್ರದೇಶದಲ್ಲಿಯೂ ಸಾಧ್ಯ.<br>❖ ಕಡಿಮೆ ವೆಚ್ಚದ್ದಾಗಿದೆ<br>❖ ವೆಚ್ಚದಾಯಕ ತಂತ್ರಜ್ಞಾನ ಬೇಕಾಗಿಲ್ಲ.<br>❖ ಸಣ್ಣ ಭೂ ಹಿಡುವಳಿ ರೈತರಿಗೂ ಸಹಕಾರಿ | **ನದಿ ಕಣಿವೆ ಯೋಜನೆಯ ಉದ್ದೇಶಗಳಾವುವು?**<br>❖ ನೀರಾವರಿ ಪೂರೈಕೆ.<br>❖ ಪ್ರವಾಹಗಳ ನಿಯಂತ್ರಣ.<br>❖ ಜಲ ವಿದ್ಯುತ್ ತಯಾರಿಕೆ.<br>❖ ಮಣ್ಣಿನ ಸವೆತ ನಿಯಂತ್ರಣ. | **ಕಾಲುವೆಗಳ ಎರಡು ವಿಧಗಳನ್ನು ವಿವರಿಸಿ.**<br>❖ ಪ್ರವಾಹ ಕಾಲುವೆ-ನೇರವಾಗಿ ನದಿಯಿಂದ ಕಾಲುವೆ ತೋಡಿ ಕೃಷಿಗೆ ನೀರು ಪೂರೈಸುವುದು<br>❖ ಸಾರ್ವಕಾಲಿಕಕಾಲುವೆ-ಅಣೆಕಟ್ಟೆಗಳನ್ನು ನಿರ್ಮಿಸಿ, ಕಾಲುವೆ ಮೂಲಕ ನೀರು ಪೂರೈಸುವುದು |
| ಘಟಕಗಳು ಸಾಮಾಜಿಕ ಸಮಸ್ಯೆಗಳು (ನಿರೀಕ್ಷಿತ ಅಂಕಗಳು 2) | | | |
| **ಬಾಲಕಾರ್ಮಿಕ ಸಮಸ್ಯೆಗೆ ಕಾರಣಗಳಾವುವು?**<br>❖ ವಲಸೆ<br>❖ ಪೋಷಕರ ದುಶ್ಚಟಗಳು<br>❖ ಕುಟುಂಬದ ಆರ್ಥಿಕ ಸ್ಥಿತಿ<br>❖ ಕನಿಷ್ಠ ಕೂಲಿ | **ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳೇನು?**<br>❖ ಪುರುಷ ಪ್ರಧಾನ ಸಮಾಜ<br>❖ ಮದುವೆ ಮತ್ತು ಆಸ್ತಿಯ ಒಡೆತನ<br>❖ ವರದಕ್ಷಿಣೆ<br>❖ ಪುತ್ರ ಸಂತಾನದ ಬಯಕೆ | **ಬಾಲ್ಯವಿವಾಹಕ್ಕೆ ಕಾರಣಗಳನ್ನು ಪಟ್ಟಿ ಮಾಡಿರಿ.**<br>❖ ಲಿಂಗ ತಾರತಮ್ಯ<br>❖ ಶಿಕ್ಷಣ ಇಲ್ಲದಿರುವಿಕೆ<br>❖ ಬಾಲಕಾರ್ಮಿಕತೆ<br>❖ ಕಡು ಬಡತನ | **ಮಕ್ಕಳ ಸಾಗಾಣಿಕೆಗೆ ಕಾರಣಗಳು**<br>❖ ಬಾಲಕಾರ್ಮಿಕತೆ ಮತ್ತು ಬಾಲ್ಯವಿವಾಹ<br>❖ ಅನಕ್ಷರತೆ ಮತ್ತು ಶಾಲೆ ಬಿಡುವುದು<br>❖ ಜೀತ ಪದ್ಧತಿ<br>❖ ಅನಿಯಮಿತ ವಲಸೆ ಮತ್ತು ಸ್ಥಳಾಂತರ |
| **ಬಾಲ ಕಾರ್ಮಿಕತನದ ದುಷ್ಪರಿಣಾಮಗಳಾವುವು?**<br>❖ ಮಕ್ಕಳ ಹಕ್ಕುಗಳ ಉಲ್ಲಂಘನೆ<br>❖ ಅನಕ್ಷರತೆಯ ಹೆಚ್ಚಳ<br>❖ ಮಕ್ಕಳ ಮಾರಾಟ ಮತ್ತು ಸಾಗಾಣಿಕೆಗೆ ಅವಕಾಶ<br>❖ ಮಕ್ಕಳ ಮೇಲಿನ ದೌರ್ಜನ್ಯಗಳ ಹೆಚ್ಚಳ | **ಹೆಣ್ಣು ಭ್ರೂಣ ಹತ್ಯೆಯ ದುಷ್ಪರಿಣಾಮಗಳು**<br>❖ ಸ್ತ್ರೀ-ಪುರುಷರ ಲಿಂಗಾನುಪಾತದಲ್ಲಿ ಅಸಮಾನತೆ<br>❖ ಲಿಂಗ ತಾರತಮ್ಯ<br>❖ ಹೆಣ್ಣಿನ ಅಪಮೌಲ್ಯೀಕರಣ | **ಬಾಲ್ಯವಿವಾಹದ ಪರಿಣಾಮಗಳು ಯಾವುವು?**<br>❖ ಮಕ್ಕಳ ಮೇಲೆ ಅತಿಯಾದ ದೌರ್ಜನ್ಯ<br>❖ ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ<br>❖ ಶಿಶು ಮತ್ತು ತಾಯಿ ಮರಣ ದರದ ಹೆಚ್ಚಳ<br>❖ ಚಿಕ್ಕ ವಯಸ್ಸಿನಲ್ಲಿ ವಿಧವೆಯಾಗುವ ಸಾಧ್ಯತೆ | **ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರಗಳು**<br>❖ ಅನಕ್ಷರತೆಯ ನಿರ್ಮೂಲನೆ<br>❖ ಕಠಿಣ ಕಾಯ್ದೆಗಳನ್ನು ಜಾರಿಗೊಳಿಸುವುದು<br>❖ ವಲಸೆಯ ನಿಯಂತ್ರಣ<br>❖ ಜನ ಜಾಗೃತಿ ಮೂಡಿಸುವುದು |

Use E-Papers, Save Tress
Above line hide when print out

## ಘಟಕಗಳು ಜಾಗತಿಕ ಸಂಸ್ಥೆಗಳು ಮತ್ತು ಭಾರತದಲ್ಲಿ ಬ್ರಿಟಿಷ್ ಆಡಳಿತದ ಪರಿಣಾಮಗಳು (ನಿರೀಕ್ಷಿತ ಅಂಕಗಳು 3 ರಿಂದ 6)

### ವಿಶ್ವಸಂಸ್ಥೆಯ ಗುರಿ/ಉದ್ದೇಶಗಳು
- ❖ ವಿಶ್ವ ಶಾಂತಿ ಮತ್ತು ಸುಭದ್ರತೆ
- ❖ ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿ
- ❖ ಮಾನವ ಹಕ್ಕುಗಳ ಬಗ್ಗೆ ನಂಬಿಕೆ
- ❖ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ
- ❖ ಜಾಗತಿಕ ಒಡಂಬಡಿಕೆಗಳ ಷರತ್ತುಗಳಿಗೆ ಮನ್ನಣೆ
- ❖ ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರ

### ವಿಶ್ವಸಂಸ್ಥೆಯ ಅಂಗ ಸಂಸ್ಥೆಗಳು
- ❖ ಸಾಮಾನ್ಯ ಸಭೆ
- ❖ ಭದ್ರತಾ ಮಂಡಳಿ
- ❖ ಆರ್ಥಿಕ ಮತ್ತು ಸಾಮಾಜಿಕ ಸಮಿತಿ
- ❖ ದತ್ತಿ ಸಮಿತಿ
- ❖ ಅಂತರರಾಷ್ಟ್ರೀಯ ನ್ಯಾಯಾಲಯ
- ❖ ಸಚಿವಾಲಯ

### ಭದ್ರತಾ ಸಮಿತಿಯ ರಚನೆ & ಅದಿಕಾರ
- ❖ ವಿಶ್ವಸಂಸ್ಥೆಯ ಸಚಿವ ಸಂಪುಟ ಎನಿಸಿದೆ.
- ❖ 5ಖಾಯಂ & 10 ಹಂಗಾಮಿ ಸದಸ್ಯರು
- ❖ ಜಾಗತಿಕ ಸಮಸ್ಯೆಗಳಿಗೆ ಶಾಂತಿಯುತ ಪರಿಹಾರ
- ❖ ಶಾಂತಿಪಾಲನಾ ಪಡೆಯ ನಿಯೋಜನೆ
- ❖ ಅಂ. ನ್ಯಾಯಾಲಯದ ನ್ಯಾಯಾಧೀಶರ ನೇಮಕ
- ❖ ಮಹಾಕಾರ್ಯದರ್ಶಿ ಆಯ್ಕೆಗೆ ಹೆಸರು ಸೂಚನೆ

### ಆರ್ಥಿಕ&ಸಾಮಾಜಿಕ ಸಮಿತಿಯ ಉದ್ದೇಶ/ಕಾರ್ಯ
- ❖ ಜಾಗತಿಕ ಸಮಸ್ಯೆಗಳ ಅಧ್ಯಯನ & ವರದಿ
- ❖ ಜಾಗತಿಕ ಸಮಸ್ಯೆಗಳ ಕಾರ್ಯವ್ಯಾಪ್ತಿ
- ❖ ಮಾನವ ಹಕ್ಕುಗಳ ಬಗ್ಗೆ ಶಿಫಾರಸ್ಸು
- ❖ ಜಾಗತಿಕ ಸಮ್ಮೇಳನಗಳ ಸಂಘಟನೆ
- ❖ ಸೇವಾ ಸಂಘಗಳ ಕಾರ್ಯಗಳ ಸಮನ್ವಯ

### ವಿಶ್ವಸಂಸ್ಥೆಯ ಆರ್ಥಿಕ & ಸಾಮಾಜಿಕ ಸಾಧನೆಗಳು
- ❖ ಆರ್ಥಿಕ & ಸಾಮಾಜಿಕ ಸಮಿತಿಯ ರಚನೆ
- ❖ ಗ್ಯಾಟ್ ಒಪ್ಪಂದ
- ❖ ವಿಶ್ವಸಂಸ್ಥೆಯ ಪ್ರಗತಿ ಯೋಜನೆ
- ❖ ಸಾಮಾಜಿಕ ಸೇವಾ ಸಂಸ್ಥೆಗಳ ಸ್ಥಾಪನೆ
- ❖ ಸಾರ್ವತ್ರಿಕ ಮಾನವ ಹಕ್ಕುಗಳ ಉದ್ಘೋಷಣೆ.
- ❖ ವರ್ಣಬೇಧ ನೀತಿ ನಿಯಂತ್ರಣ

### ವಿಶ್ವಸಂಸ್ಥೆ ಆಶ್ರಯದ ಸೇವಾ ಸಂಸ್ಥೆಗಳು
- ❖ ಆಹಾರ ಮತ್ತು ಕೃಷಿ ಸಂಸ್ಥೆ
- ❖ ವಿಶ್ವ ಆರೋಗ್ಯ ಸಂಸ್ಥೆ
- ❖ ಯುನೆಸ್ಕೋ
- ❖ ಯುನಿಸೆಫ್
- ❖ ಐ.ಎಂ.ಎಫ್
- ❖ ಐ.ಬಿ.ಆರ್.ಡಿ

### ಬ್ರಿಟಿಷರ ಕಂದಾಯ ನೀತಿಯ ಪರಿಣಾಮಗಳು
- ❖ ಜಮೀನ್ದಾರಿ ಸಮುದಾಯ ಸೃಷ್ಟಿಯಾಯಿತು.
- ❖ ರೈತರು ವಿವಿಧ ಸಂಕಷ್ಟಗಳಿಗೆ ಒಳಗಾದರು.
- ❖ ಭೂಮಿ ಮಾರಾಟದ ವಸ್ತುವಾಯಿತು.
- ❖ ಅನೇಕ ಜಮೀನ್ದಾರರೂ ಸಂಕಷ್ಟಕ್ಕೆ ಒಳಗಾದರು.
- ❖ ಕೈಗಾರಿಕಾ ಕಚ್ಚಾವಸ್ತುಗಳನ್ನೇ ಬೆಳೆಯಬೇಕಾಯಿತು.
- ❖ ಹಣದ ಲೇವಾದೇವಿಗಾರರು ಬಲಿಷ್ಠರಾದರು.

### ಬ್ರಿಟಿಷ್ ಶಿಕ್ಷಣದ ಪರಿಣಾಮಗಳು
- ❖ ಪ್ರಜಾಪ್ರಭುತ್ವ ಇತ್ಯಾದಿ ಪರಿಕಲ್ಪನೆಗಳ ಪರಿಚಯ
- ❖ ರಾಷ್ಟ್ರೀಯವಾದಿ ದೃಷ್ಟಿಕೋನ ಬೆಳವಣಿಗೆ
- ❖ ವೃತ್ತ ಪತ್ರಿಕೆಗಳ ಉಗಮ
- ❖ ಸಾಮಾಜಿಕ ಸುಧಾರಣಾ ಚಳವಳಿಗಳ ಉಗಮ
- ❖ ಆಲೋಚನಾ ಕ್ರಮದಲ್ಲಿ ನಾವಿನ್ಯತೆ
- ❖ ಭಾರತೀಯ ಸಾಂಸ್ಕೃತಿಕ ಪರಂಪರೆಯ ಅರಿವು

### 1919ರ ಕಾಯ್ದೆಯ ಪ್ರಮುಖಾಂಶಗಳು
- ❖ ಕೇಂದ್ರದಲ್ಲಿ ದ್ವಿಸದನ ಶಾಸಕಾಂಗ ರಚನೆ
- ❖ ಪ್ರಾಂತ್ಯಗಳಲ್ಲಿ "ದ್ವಿಸರಕಾರ" ಪದ್ದತಿಗೆ ಅವಕಾಶ
- ❖ ಭಾರತಕ್ಕೆ ಒಬ್ಬ ಹೈಕಮಿಷನರ್ ನೇಮಕ
- ❖ ಸ್ವಯಂ ಆಡಳಿತವುಳ್ಳ ಸ್ಥಳೀಯ ಸಂಸ್ಥೆಗಳ ರಚನೆ
- ❖ ಪ್ರಾಂತ್ಯಗಳಿಗೆ ಪ್ರತ್ಯೇಕ ಬಜೆಟ್
- ❖ ಪ್ರತ್ಯೇಕ ಚುನಾವಣಾ ಮತಗಟ್ಟೆಗಳ ವಿಸ್ತರಣೆ

### 1935ರ ಭಾರತ ಸರ್ಕಾರ ಕಾಯ್ದೆಯ ಅಂಶಗಳು
- ❖ ಅಖಿಲ ಭಾರತ ಒಕ್ಕೂಟ ರಚನೆಗೆ ಅವಕಾಶ
- ❖ ಕೇಂದ್ರದಲ್ಲಿ ದ್ವಿ ಸರಕಾರ ಸ್ಥಾಪನೆ
- ❖ ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆ
- ❖ ಪ್ರಾಂತ್ಯಗಳಲ್ಲಿ ದ್ವಿ ಸರಕಾರ ಪದ್ಧತಿಯ ರದ್ದತಿ
- ❖ ಪ್ರಾಂತ್ಯಗಳಿಗೆ ಸ್ವಾಯತ್ತತೆ
- ❖ ಭಾರತದಲ್ಲಿ "ಫೆಡರಲ್ ಕೋರ್ಟ್" ಸ್ಥಾಪನೆ

### ಕಾರಣಗಳು(ಕಾರಣವೇನು?)
- ❖ 1ನೇ ಆಂಗ್ಲೋ ಮರಾಠ ಯುದ್ಧ – ಪೇಶ್ವೆ ಹುದ್ದೆಗಾಗಿ ಮರಾಠರ ಅಂತರಿಕ ಕಚ್ಚಾಟ
- ❖ 2ನೇ ಆಂಗ್ಲೋ ಮರಾಠ ಯುದ್ಧ – ಮರಾಠ ಮನೆತನಗಳ ನಾಯಕರ ನಡುವಿನ ಸಂಘರ್ಷ
- ❖ 3ನೇ ಆಂಗ್ಲೋ ಮರಾಠ ಯುದ್ಧ – ಘನತೆ ಮತ್ತು ಸ್ವಾತಂತ್ರ್ಯಕ್ಕಾಗಿ ಮರಾಠ ಮನೆತನಗಳ ಪ್ರಯತ್ನ
- ❖ 1ನೇ ಆಂಗ್ಲೋ ಮೈಸೂರು ಯುದ್ಧ – ಹೈದರಾಲಿಯಿಂದ ಆರ್ಕಾಟ್ ಮುತ್ತಿಗೆ
- ❖ 2ನೇ ಆಂಗ್ಲೋ ಮೈಸೂರು ಯುದ್ಧ – ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು
- ❖ 3ನೇ ಆಂಗ್ಲೋ ಮೈಸೂರು ಯುದ್ಧ – ತಿರುವಾಂಕೂರಿನ ರಾಜಕೀಯ ಸಮಸ್ಯೆಗಳು
- ❖ 4ನೇ ಆಂಗ್ಲೋ ಮೈಸೂರು ಯುದ್ಧ – ಟಿಪ್ಪುವಿನಿಂದ ಅಸಮಾನ ಒಪ್ಪಂದ ನಿರಾಕರಣೆ
- ❖ ಕಿತ್ತೂರಿನ ಬಂಡಾಯ – ದತ್ತು ಮಕ್ಕಳಿಗೆ ಹಕ್ಕಿಲ್ಲ ಪದ್ಧತಿ
- ❖ 1857ರ ದಂಗೆ – ತೂಪಾಕಿಗೆ ಹಸು ಮತ್ತು ಹಂದಿ ಕೊಬ್ಬು ಸವರಿದ್ದಾರೆಂಬ ವದಂತಿ
- ❖ ಬಂಗಾಳ ವಿಭಜನೆ –
- ❖ 1ನೇ ಮಹಾಯುದ್ಧ – ಆಸ್ಟ್ರಿಯಾದ ರಾಜಕುಮಾರ ಆರ್ಕ್‌ಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆ.
- ❖ 2ನೇ ಮಹಾಯುದ್ಧ – ಪೋಲೆಂಡ್ ಮೇಲೆ ರಷ್ಯಾದ ದಾಳಿ
- ❖ ರಷ್ಯಾ ವಿಘಟನೆ – ಗ್ಲಾಸ್‌ನೋಸ್ತ್ ಮತ್ತು ಪೆರೆಸ್ತ್ರೋಯಿಕ್

### ವ್ಯಾಖ್ಯೆಗಳು
- ❖ ಭ್ರಷ್ಟಾಚಾರ – ಲಂಚ/ಇನ್ನಾವುದೇ ಕ್ರಮದಿಂದ ಕಾನೂನು ಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವಿಕೆ.
- ❖ ಅಲಿಪ್ತ ನೀತಿ – ಯಾವುದೇ ಶಕ್ತಿ ಬಣವನ್ನು ಸೇರದೇ ತಟಸ್ಥವಾಗಿರುವುದು.
- ❖ ವಿದೇಶಾಂಗ ನೀತಿ – ರಾಷ್ಟ್ರವೊಂದು ಅನ್ಯ ರಾಷ್ಟ್ರಗಳೊಡನೆ ವ್ಯವಹರಿಸುವಾಗ ಅನುಸರಿಸುವ ನೀತಿ.
- ❖ ನಿಶ್ಯಸ್ತ್ರೀಕರಣ – ನಿರ್ದಿಷ್ಟ/ಎಲ್ಲಾ ಶಸ್ತ್ರಾಸ್ತ್ರಗಳನ್ನು ಕಡಿತಗೊಳಿಸುವ ನೇರ ಪ್ರಕ್ರಿಯೆ.
- ❖ ಸಾಮಾಜಿಕ ಸ್ತರ ವಿನ್ಯಾಸ – ಸಮಾಜದಲ್ಲಿ ಇರುವ ಜನರನ್ನು ವಿಭಿನ್ನ ಸ್ತರಗಳಾಗಿ ವರ್ಗೀಕರಿಸುವ ವ್ಯವಸ್ಥೆ.
- ❖ ಗ್ರಾಮೀಣಾಬಿವೃದ್ಧಿ – ಗ್ರಾಮಗಳ ಆರ್ಥಿಕ ಮತ್ತು ಸಾಮಾಜಿಕ ಪ್ರಗತಿ ಸಾಧಿಸುವ ಪ್ರಕ್ರಿಯೆ.
- ❖ ಜಾಗತೀಕರಣ – ಭಾರತದ ಅರ್ಥಿಕತೆಯನ್ನು ವಿಶ್ವದ ಅರ್ಥವ್ಯವಸ್ಥೆಯ ಜೊತೆಗೆ ಒಗ್ಗೂಡಿಸುವ ಪ್ರಕ್ರಿಯೆ.
- ❖ ಪ್ರಾದೇಶಿಕ ಅಸಮತೋಲನ – ಅಭಿವೃದ್ಧಿಯ ಹೆಸರಿನಲ್ಲಿ ರಾಷ್ಟ್ರದ ಕೆಲವು ಪ್ರದೇಶಗಳು ಸ್ವಾಭಾವಿಕವಾಗಿಯೇ ಮುಂದುವರೆದಿದ್ದರೆ ಕೆಲವು ಪ್ರದೇಶಗಳು ಹಿಂದುಳಿದಿರುವಿಕೆ.
- ❖ ಕಾರ್ಪೋರೇಟ್ ತಂತ್ರಗಾರಿಕೆ – ಒಂದು ನಿರ್ದಿಷ್ಟ ಉದ್ದೇಶದೊಂದಿಗೆ ಪೂರ್ವ ನಿರ್ಧಾರಿತ ಗುರಿಗಳನ್ನು ತಲುಪಲು ಕಂಪನಿಯು ಕೈಗೊಳ್ಳುವ ವಿವಿಧ ರೀತಿಯ ಆಡಳಿತಾತ್ಮಕ ಪ್ರಯತ್ನಗಳು.
- ❖ ವಸಾಹತು ಶಾಹಿತ್ವ – ಒಂದು ರಾಷ್ಟ್ರ ಇನ್ನೊಂದು ರಾಷ್ಟ್ರದ ಸಾರ್ವಭೌಮತ್ವವನ್ನು ಹತ್ತಿಕ್ಕಿ ಸ್ವಾರ್ಥಕ್ಕಾಗಿ ದುರುಪಯೋಗಪಡಿಸಿಕೊಳ್ಳುವುದು.
- ❖ ತೃತೀಯ ಜಗತ್ತು – ಶೀತಲ ಸಮರದ ವೇಳೆ ಅಮೇರಿಕಾ ಅಥವಾ ರಷ್ಯಾ ಬಣವನ್ನು ಸೇರದೇ ತಟಸ್ಥವಾಗಿದ್ದ ರಾಷ್ಟ್ರಗಳ ಗುಂಪು
- ❖ ವಿಕೇಂದ್ರೀಕರಣ – ಪ್ರತಿಯೊಂದು ಗ್ರಾಮದ ಆಡಳಿತಾಧಿಕಾರ ಹಾಗೂ ಅದರ ಅಭಿವೃದ್ಧಿಯ ಜವಾಬ್ದಾರಿಯನ್ನು ಗ್ರಾಮಸ್ಥರಿಗೇ ವಹಿಸಿಕೊಡುವುದು.

Use E-Papers, Save Tress
Above line hide when print out

## ಘಟಕಗಳು ಸಾಮಾಜಿಕ ಸ್ತರವಿನ್ಯಾಸ ಮತ್ತು ಭಾರತದ ಕೈಗಾರಿಕೆಗಳು (ನಿರೀಕ್ಷಿತ ಅಂಕಗಳು 3 ರಿಂದ 6)

### ಶೈಕ್ಷಣಿಕ ಅಸಮಾನತೆಯನ್ನು ನಿವಾರಿಸುವಲ್ಲಿ ಸಂವಿಧಾನದ ಪಾತ್ರ
- ❖ 21ಎ ವಿಧಿ– ಶಿಕ್ಷಣ ಮೂಲಭೂತ ಹಕ್ಕು
- ❖ 29ನೇ ವಿಧಿ – ಅಲ್ಪಸಂಖ್ಯಾತರ ಸಾಂಸ್ಕೃತಿಕ ಹಕ್ಕುಗಳಿಗೆ ರಕ್ಷಣೆ
- ❖ 30ನೇ ವಿಧಿ –ಅಲ್ಪಸಂಖ್ಯಾತರು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಲು ಅವಕಾಶ
- ❖ 45ನೇ ವಿಧಿ– 6ರಿಂದ14 ವರ್ಷದೊಳಗಿನ ಮಕ್ಕಳಿಗೆ ಉಚಿತ&ಕಡ್ಡಾಯ ಶಿಕ್ಷಣ
- ❖ 46ನೇ ವಿಧಿ – ಜಾತಿ/ಪಂಗಡಗಳ ಶೈಕ್ಷಣಿಕ ಆಸಕ್ತಿಗಳಿಗೆ ಬೆಂಬಲ
- ❖ 86ನೇ ತಿದ್ದುಪಡಿ – ಶಿಕ್ಷಣ ಮೂಲಭೂತ ಹಕ್ಕಾಗಿ ಸರ್ಪಡೆ

### ಸಾಮಾಜಿಕ ಸ್ತರವಿನ್ಯಾಸದ ಪ್ರಮುಖ ರೂಪಗಳು
- ❖ ಆದಿವಾಸಿ ಸಮಾಜ
- ❖ ಗುಲಾಮಗಿರಿ
- ❖ ಎಸ್ಟೇಟ್ಸ್ ಪದ್ಧತಿ
- ❖ ವರ್ಣವ್ಯವಸ್ಥೆ
- ❖ ಜಾತಿವ್ಯವಸ್ಥೆ

### ಅಸ್ಪೃಶ್ಯತೆ ಸಾಮಾಜಿಕ ಪಿಡುಗು/ ಅದರ ದುಷ್ಪರಿಣಾಮಗಳನ್ನು ವಿವರಿಸಿ.
- ❖ ಸಾಮಾಜಿಕ ವ್ಯವಸ್ಥೆಯಲ್ಲಿ ಅತ್ಯಂತ ಕೆಳಮಟ್ಟದ ಸ್ಥಾನ
- ❖ ಶೈಕ್ಷಣಿಕ ಅವಕಾಶಗಳಿಂದ ಹೊರಗಿಡಲಾಗಿತ್ತು
- ❖ ಆಸ್ತಿಯ ಒಡೆತನದ ಹಕ್ಕಿನ ನಿರಾಕರಣೆ
- ❖ ರಾಜಕೀಯ ಭಾಗವಹಿಸುವಿಕೆ ನಿರಾಕರಣೆ
- ❖ ಮಾನವ ಹಕ್ಕುಗಳ ನಿರಾಕರಣೆ

### ಅಸ್ಪೃಶ್ಯತೆ ನಿವಾರಣೆಯ ಸಂವಿಧಾನಾತ್ಮಕ & ಶಾಸನಾತ್ಮಕ ಕ್ರಮಗಳಾವುವು?
- ❖ 17ನೇ ವಿಧಿಯ ಪ್ರಕಾರ ಅಸ್ಪೃಶ್ಯತೆಯ ನಿಷೇಧ
- ❖ 1955ರಲ್ಲಿ ಅಸ್ಪೃಶ್ಯತಾ ಅಪರಾಧ ಕಾಯ್ದೆ ಜಾರಿ
- ❖ ಸಾರ್ವತ್ರಿಕ ಮತದಾನದ ಹಕ್ಕು
- ❖ ಸಮಾನ ನಾಗರೀಕ ಹಕ್ಕುಗಳು
- ❖ ಶೈಕ್ಷಣಿಕ & ಉದ್ಯೋಗದಲ್ಲಿ ಮೀಸಲಾತಿ
- ❖ ರಾಜ್ಯಗಳಿಗೆ ವಿಶೇಷ ಜವಬ್ದಾರಿ

### ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕೆಗಳ ಮಹತ್ವ
- ❖ ಪ್ರಾಥಮಿಕ ಸರಕುಗಳ ಕಡಿಮೆ ಅವಲಂಬನೆ
- ❖ ಕಡಿಮೆ ಆಮದು
- ❖ ರಾಷ್ಟ್ರಾದಾಯ ಮತ್ತು ತಲಾದಾಯ ಹೆಚ್ಚಳ
- ❖ ವಿದೇಶೀ ವಿನಿಮಯ ಗಳಿಕೆ
- ❖ ಉದ್ಯೋಗಾವಕಾಶಗಳ ಹೆಚ್ಚಳ
- ❖ ಜಿಡಿಪಿ & ಜನರ ಜೀವನಮಟ್ಟದಲ್ಲಿ ಸುಧಾರಣೆ

### ಕೈಗಾರಿಕಾ ಸ್ಥಾನೀಕರಣದ ಅಂಶಗಳು
- ❖ ಕಚ್ಚಾ ವಸ್ತುಗಳ ಪೂರೈಕೆ
- ❖ ಶಕ್ತಿ ಸಂಪನ್ಮೂಲಗಳ ಪೂರೈಕೆ
- ❖ ಸಾರಿಗೆ ಮತ್ತು ಸಂಪರ್ಕ
- ❖ ಮಾರುಕಟ್ಟೆ ಸೌಲಭ್ಯ
- ❖ ಕಾರ್ಮಿಕರ ಲಭ್ಯತೆ
- ❖ ಸರ್ಕಾರದ ನೀತಿಗಳು

### ಭಾರತದ ಪ್ರಮುಖ ಕೈಗಾರಿಕಾ ಪ್ರದೇಶಗಳು
- ❖ ಹೂಗ್ಲಿ–ಕೊಲ್ಕತ ಪ್ರದೇಶ
- ❖ ಮುಂಬಯಿ–ಪುಣೆ ಪ್ರದೇಶ
- ❖ ಅಹ್ಮದಾಬಾದ್–ವಡೋದರ ಪ್ರದೇಶ
- ❖ ದೆಹಲಿ–ಮೀರತ್ ಪ್ರದೇಶ
- ❖ ವಿಶಾಖಪಟ್ಟಣ–ಗುಂಟೂರು ಪ್ರದೇಶ
- ❖ ಕೊಲ್ಲಂ–ತಿರುವನಂತಪುರ ಪ್ರದೇಶ

### ಜ್ಞಾನಾಧಾರಿತ ಕೈಗಾರಿಕೆಗಳ ಪ್ರಾಮುಖ್ಯತೆ
- ❖ ಉದ್ಯೋಗಾವಕಾಶಗಳ ಸೃಷ್ಟಿ
- ❖ ವಿದೇಶಿ ವಿನಿಮಯ ಗಳಿಕೆ
- ❖ ಆರ್ಥಿಕಾಭಿವೃದ್ಧಿ
- ❖ ತ್ವರಿತ ತಾಂತ್ರಿಕ & ವೈಜ್ಞಾನಿಕ ಬೆಳವಣಿಗೆ
- ❖ ಮೂಲಭೂತ ಸೌಕರ್ಯಗಳ ವೃದ್ಧಿ
- ❖ ಆಡಳಿತ ಸುಧಾರಣೆಗೆ ಸಹಕಾರಿ

## ಘಟಕಗಳು ಭಾರತದ ಅರಣ್ಯಗಳು (ನಿರೀಕ್ಷಿತ ಅಂಕಗಳು 1 ರಿಂದ 2)

### ಅರಣ್ಯಗಳ ಪ್ರಾಮುಖ್ಯತೆಯನ್ನು ವಿವರಿಸಿ.
- ❖ ಕಚ್ಚಾಪದಾರ್ಥಗಳ ಪೂರೈಕೆ
- ❖ ಜಾನುವಾರುಗಳಿಗೆ ಮೇವು
- ❖ ಜನರಿಗೆ ಉದ್ಯೋಗಾವಕಾಶ
- ❖ ವನ್ಯ ಜೀವಿಗಳಿಗೆ ಆಶ್ರಯ

### ಭಾರತದಲ್ಲಿ ಅರಣ್ಯ ನಾಶಕ್ಕೆ ಕಾರಣಗಳು
- ❖ ಕೃಷಿ ಕ್ಷೇತ್ರದ ವಿಸ್ತರಣೆ
- ❖ ಕೈಗಾರಿಕೀಕರಣ
- ❖ ನಗರೀಕರಣ
- ❖ ಕಾಡ್ಗಿಚ್ಚು

### ಅರಣ್ಯ ಸಂರಕ್ಷಣಾ ಕ್ರಮಗಳು
- ❖ ಅರಣ್ಯ ನಾಶ ನಿಯಂತ್ರಣ
- ❖ ಮೇಯಿಸುವುದನ್ನು ತಡೆಗಟ್ಟುವಿಕೆ
- ❖ ಕಾಡ್ಗಿಚ್ಚು ನಿಯಂತ್ರಣ
- ❖ ಕೀಟ ಮತ್ತು ರೋಗಗಳ ನಿಯಂತ್ರಣ

### ನಿತ್ಯಹರಿದ್ವರ್ಣದ ಕಾಡುಗಳು
- ❖ 250ಸೆ.ಮೀಗೂ ಅಧಿಕ ಮಳೆ ಬೀಳುವಲ್ಲಿವೆ
- ❖ ಸದಾ ಹಸಿರಿನಿಂದ ಕೂಡಿರುತ್ತವೆ
- ❖ ಪಶ್ಚಿಮ ಘಟ್ಟ ಮತ್ತು ಈಶಾನ್ಯ ರಾಜ್ಯಗಳಲ್ಲಿವೆ
- ❖ ಪ್ರಮುಖ ಮರ– ತೇಗ, ಬೀಟೆ, ಎಬೋನಿ

### ಉಷ್ಣವಲಯದ ಎಲೆ ಉದುರಿಸುವ ಕಾಡುಗಳು
- ❖ 100 – 200 ಸೆಂ.ಮೀ. ಮಳೆ ಬೀಳುವಲ್ಲಿವೆ
- ❖ ನಿರ್ದಿಷ್ಟ ಕಾಲದಲ್ಲಿ ಎಲೆಗಳನ್ನು ಉದುರಿಸುತ್ತವೆ
- ❖ ಪ್ರಮುಖ ಮರ–ತೇಗ, ಸಲೆ, ಶ್ರೀಗಂಧ

### ಕುರುಚಲು ಸಸ್ಯ ಮತ್ತು ಹುಲ್ಲುಗಾವಲು
- ❖ 60–100 ಸೆಂ.ಮೀ. ಮಳೆ ಬೀಳುವಲ್ಲಿವೆ.
- ❖ ಹುಲ್ಲು, ಮುಳ್ಳಿನ ಗಿಡ–ಮರಗಳು ಬೆಳೆಯುತ್ತವೆ
- ❖ ಕಛ್&ಥಾರ್ ಮರುಭೂಮಿ ಅಂಚಿನಲ್ಲಿವೆ

### ಮರುಭೂಮಿ ಸಸ್ಯವರ್ಗ
- ❖ 10–50 ಸೆಂ.ಮೀ. ಮಳೆಯಾಗುವಲ್ಲಿದೆ
- ❖ ಥಾರ್ ಮರುಭೂಮಿಯಲ್ಲಿ ಕಂಡುಬರುತ್ತದೆ
- ❖ ಪ್ರಮುಖ ಮರ– ಕಗ್ಗಲಿ, ಗೊಬ್ಬಳಿ, ಕಳ್ಳಿ

### ಮ್ಯಾಂಗ್ರೋವ್ ಕಾಡುಗಳು
- ❖ ಸಮುದ್ರ ತೀರಗಳಲ್ಲಿ ಕಂಡುಬರುತ್ತವೆ
- ❖ ಬಿಳಿಲುಗಳು ಈ ಕಾಡುಗಳ ವಿಶೇಷತೆ
- ❖ ಪ್ರಮುಖ ಮರ–ಸುಂದರಿ, ಬೆತ್ತ, ತಾಳೆ, ಕಂದಾಳೆ

### ಪರ್ವತ ಕಾಡುಗಳು
- ❖ ಪರ್ವತಗಳ ಇಳಿಜಾರುಗಳಲ್ಲಿ ಕಂಡು ಬರುತ್ತವೆ.
- ❖ ಹಿಮಾಲಯ ಪರ್ವತಗಳು & ನೀಲಗಿರಿ ಬೆಟ್ಟಗಳಲ್ಲಿವೆ
- ❖ ಪ್ರಮುಖ ಮರ– ಓಕ್, ಚೆಸ್ಟನಟ್, ಆಶ್, ಬೀಚ್.

---

- ❖ 17ನೇ ವಿಧಿ – ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ
- ❖ 19ನೇ ವಿಧಿ – ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ
- ❖ 21ನೇ ವಿಧಿ – ಜೀವಿಸುವುದು ಮೂಲಭೂತ ಹಕ್ಕು
- ❖ 24 ನೇ ವಿಧಿ – ಮಕ್ಕಳ ದುಡಿಮೆಗೆ ನಿಷೇಧ

---

- ❖ 51ನೇ ವಿಧಿ – ಅಂತರರಾಷ್ಟ್ರೀಯ ಶಾಂತಿ ಮತ್ತು ಸೌಹಾರ್ದತೆ
- ❖ 73ನೇ ತಿದ್ದುಪಡಿ – ಏಕರೂಪದ ಪಂಚಾಯತ್ ರಾಜ್ ವ್ಯವಸ್ಥೆ
- ❖ 371ನೇ ವಿಧಿ – ಪ್ರಾದೇಶಿಕ ಅಸಮಾನತೆಯ ನಿವಾರಣೆ
- ❖ 371ನೇ 'ಜೆ' ವಿಧಿ – ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆಯ ನಿವಾರಣೆ

---

- ❖ **ಭೌಗೋಳಿಕ ಮಾಹಿತಿ ವ್ಯವಸ್ಥೆ** – ಪೃಥ್ವಿಯ ಮೇಲ್ಭಾಗದ ವಿವರಣಾ ಸ್ಥಳಗಳ ಮಾಹಿತಿ ಸಂಗ್ರಹಿಸುವ ಮತ್ತು ತಿಳಿಸುವ ಒಂದು ಕಂಪ್ಯೂಟರ್ ವ್ಯವಸ್ಥೆ.
- ❖ **ಜಾಗತಿಕ ಸ್ಥಾನ ನಿರ್ಧಾರ ವ್ಯವಸ್ಥೆ** – ಪೃಥ್ವಿಯ ಮೇಲಿನ ಚರ, ಸ್ಥಿರ ವಸ್ತು ಅಥವಾ ವ್ಯಕ್ತಿಯ ಸ್ಥಾನ ನಿರ್ಧರಿಸುವ ವ್ಯವಸ್ಥೆ.
- ❖ **ದೂರ ಸಂವೇದಿ ತಂತ್ರಜ್ಞಾನ** – ಒಂದು ವಸ್ತು, ಸ್ಥಳ ಅಥವಾ ಲಕ್ಷಣಗಳನ್ನು ನೇರ ಸಂಪರ್ಕ ಹೊಂದದೆ ಮಾಹಿತಿಗಳನ್ನು ಸಂಗ್ರಹಿಸುವ ಮಾಧ್ಯಮ

---

- ❖ ಸಂವಾದ ಕೌಮುದಿ(ಪತ್ರಿಕೆ) – ರಾಜಾ ರಾಮಮೋಹನ್‌ರಾಯ್
- ❖ ಸತ್ಯಾರ್ಥ ಪ್ರಕಾಶ(ಗ್ರಂಥ) – ದಯಾನಂದ ಸರಸ್ವತಿ
- ❖ ಗುಲಾಮಗಿರಿ(ಗ್ರಂಥ) – ಜ್ಯೋತಿಭಾ ಫುಲೆ

Use E-Papers, Save Tress
Above line hide when print out

## ಘಟಕಗಳು    ಬ್ಯಾಂಕು ವ್ಯವಹಾರ ಹಾಗೂ ಹಣ ಮತ್ತು ಸಾಲ   (ನಿರೀಕ್ಷಿತ ಅಂಕಗಳು 3 ರಿಂದ 6)

| ಬ್ಯಾಂಕಿನ ಗುಣಲಕ್ಷಣಗಳನ್ನು ಪಟ್ಟಿ ಮಾಡಿ. | ಬ್ಯಾಂಕಿನ ಕಾರ್ಯ/ಮಹತ್ವ/ಸೇವೆ/ಅನುಕೂಲಗಳು | ಬ್ಯಾಂಕ್ ಖಾತೆಯನ್ನು ತೆರೆಯುವ ವಿಧಾನ | ಅಂಚೆಕಛೇರಿಗಳ ಹಣಕಾಸಿನ ವ್ಯವಹಾರಗಳು |
|---|---|---|---|
| ❖ ಸಾರ್ವಜನಿಕರ ಹಣದ ವಹಿವಾಟು<br>❖ ಒಬ್ಬ ವ್ಯಕ್ತಿ/ಒಂದು ಸಂಸ್ಥೆ/ಕಂಪನಿ<br>❖ ಠೇವಣಿಗಳ ಅಂಗೀಕಾರ<br>❖ ಸಾಲ ನೀಡುತ್ತವೆ<br>❖ ಗ್ರಾಹಕರಿಗೆ ಉಪಯುಕ್ತ ಸೇವೆಗಳು<br>❖ ಹೆಸರಿನೊಂದಿಗೆ ಬ್ಯಾಂಕ್ ಎಂಬ ಪದ<br>❖ ಚೆಕ್ಕ್/ಹುಂಡಿಗಳ ಮೂಲಕ ಹಣ ಪಾವತಿ | ❖ ಠೇವಣಿಗಳ ಅಂಗೀಕಾರ<br>❖ ಸಾಲ ಕೊಡುವುದು<br>❖ ಹಣದ ವರ್ಗಾವಣೆ<br>❖ ಹಣದ ವಸೂಲಿ ಮತ್ತು ಪಾವತಿ<br>❖ ಭದ್ರತಾ ಕಪಾಟುಗಳನ್ನು ಒದಗಿಸುವುದು<br>❖ ಜಮಾ ಕಾರ್ಡುಗಳನ್ನು ಕೊಡುವುದು<br>❖ ಭರವಸೆಯ ಸೇವೆಗಳು | ❖ ಬ್ಯಾಂಕ್ ಖಾತೆಯನ್ನು ನಿರ್ಧರಿಸುವುದು<br>❖ ಬ್ಯಾಂಕ್ ಅಧಿಕಾರಿಯನ್ನು ಸಂಪರ್ಕಿಸುವುದು<br>❖ ಪ್ರಸ್ತಾವನೆ ಅರ್ಜಿ ತುಂಬುವುದು<br>❖ ಪರಿಚಿತರ ಉಲ್ಲೇಖನ<br>❖ ಅರ್ಜಿಯನ್ನು ಅಧಿಕಾರಿಗೆ ಒಪ್ಪಿಸುವುದು<br>❖ ಅಧಿಕಾರಿಯ ಒಪ್ಪಿಗೆ<br>❖ ಆರಂಭಿಕ ಠೇವಣಿ | ❖ ರಾಷ್ಟ್ರೀಯ ಉಳಿತಾಯ ಪತ್ರ<br>❖ ಅಂಚೆ ಉಳಿತಾಯ ಖಾತೆಗಳು<br>❖ ಕಿಸಾನ್ ವಿಕಾಸ ಪತ್ರ<br>❖ ಆವರ್ತ ಠೇವಣಿಗಳು<br>❖ ಅಂಚೆ ವಿಮೆ & ನಿವೃತ್ತಿ ವೇತನ<br>❖ ಹಣದ ವರ್ಗಾವಣೆ |
| **ಭಾರತೀಯ ರಿಜರ್ವ ಬ್ಯಾಂಕಿನ ಕಾರ್ಯಗಳು** | **ಭಾರತೀಯ ರಿಜರ್ವ್ ಬ್ಯಾಂಕ್ ಸರ್ಕಾರದ ಬ್ಯಾಂಕಾಗಿ ಕಾರ್ಯ ನಿರ್ಹಿಸುತ್ತದೆ. ಸಮರ್ಥಿಸಿ** | **ಭಾರತೀಯ ರಿಜರ್ವ್ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯುತ್ತಾರೆ. ಏಕೆ?** | **ಆರ್.ಬಿ.ಐ ನ ಸಾಲ ನಿಯಂತ್ರಣ ಕ್ರಮಗಳು** |
| ❖ ನೋಟು ಚಲಾವಣೆಯ ಏಕಸ್ವಾಮ್ಯ<br>❖ ಸರ್ಕಾರದ ಬ್ಯಾಂಕು<br>❖ ಬ್ಯಾಂಕುಗಳ ಬ್ಯಾಂಕು<br>❖ ರಾಷ್ಟ್ರೀಯ ಸಂದಾಯ ಕೇಂದ್ರ<br>❖ ಸಾಲ ಪ್ರಮಾಣದ ನಿಯಂತ್ರಕ<br>❖ ಬ್ಯಾಂಕಿಂಗ್ ಹವ್ಯಾಸದ ಅಭಿವೃದ್ಧಿ | ❖ ಸರ್ಕಾರಗಳ ಠೇವಣಿ ಸ್ವೀಕಾರ<br>❖ ಸರ್ಕಾರದ ಪರವಾಗಿ ಪಾವತಿ ಸ್ವೀಕಾರ<br>❖ ಸರ್ಕಾರದ ಪರವಾಗಿ ಹಣ ಪಾವತಿ<br>❖ ಸಾಲ ಪತ್ರಗಳ ನೀಡುವಿಕೆ<br>❖ ಸರ್ಕಾರದ ಹಣಕಾಸು ಸಲಹೆಗಾರ<br>❖ ಸರ್ಕಾರಗಳಿಗೆ ಸಾಲವನ್ನು ಒದಗಿಸುವಿಕೆ | ❖ ಬ್ಯಾಂಕುಗಳ ಬ್ಯಾಂಕಾಗಿ ಕಾರ್ಯನಿರ್ವಹಣೆ.<br>❖ ದೇಶದ ಎಲ್ಲಾ ಬ್ಯಾಂಕುಗಳ ನಿಯಂತ್ರಣ.<br>❖ ಎಲ್ಲಾ ಬ್ಯಾಂಕುಗಳು ಆರ್.ಬಿ.ಐನಲ್ಲಿ ಮೀಸಲು ಇಡಬೇಕು.<br>❖ ಬ್ಯಾಂಕುಗಳಿಗೆ ಸಾಲ ಒದಗಿಸುತ್ತದೆ.<br>❖ ಬ್ಯಾಂಕುಗಳಿಗೆ ಮಾರ್ಗದರ್ಶನ ನೀಡುತ್ತದೆ. | ❖ ಬ್ಯಾಂಕ್ ದರ<br>❖ ಮುಕ್ತ ಮಾರುಕಟ್ಟೆ ಕಾರ್ಯಾಚರಣೆ<br>❖ ಮೀಸಲು ಅನುಪಾತದ ಏರಿಳಿತ<br>❖ ಮಾರ್ಜಿನ್ ಪ್ರಮಾಣದ ಬದಲಾವಣೆ<br>❖ ಸಾಲದ ಗರಿಷ್ಠ ಮಿತಿ ನಿಗದಿ<br>❖ ನೈತಿಕ ಒತ್ತಡ<br>❖ ನೇರ ಕ್ರಮ |
| **ಹಣದ ಪ್ರಾಥಮಿಕ ಹಾಗೂ ಪೂರಕ ಕಾರ್ಯಗಳು** | **ಹಣದ ವಿಕಾಸದ ಹಂತಗಳನ್ನು ವಿವರಿಸಿ.** | **ಬ್ಯಾಂಕ್ ಮತ್ತು ಗ್ರಾಹಕರ ಸಂಬಂಧವನ್ನು ವಿವರಿಸಿ.** | **ಬ್ಯಾಂಕುಗಳ ವಿವಿಧ ಪ್ರಕಾರಗಳನ್ನು ಹೆಸರಿಸಿ.** |
| ಪ್ರಾಥಮಿಕ ಕಾರ್ಯ<br>❖ ವಿನಿಮಯ ಮಾಧ್ಯಮ<br>❖ ಮೌಲ್ಯ ನಿರ್ಣಯ<br>ಪೂರಕ ಕಾರ್ಯ<br>❖ ವಿಳಂಬಿತ ಸಂದಾಯದ ಪ್ರಮಾಣ<br>❖ ಖರೀದಿ ಶಕ್ತಿಯ ಸಂಗ್ರಹ<br>❖ ಖರೀದಿ ಶಕ್ತಿಯ ವರ್ಗಾವಣೆ | ❖ ಸಾಟಿ (ವಸ್ತು) ವಿನಿಮಯ ಪದ್ಧತಿ<br>❖ ವಸ್ತು ರೂಪದ ಹಣ<br>❖ ಲೋಹದ ಹಣ<br>❖ ಕಾಗದದ ಹಣ<br>❖ ಬ್ಯಾಂಕ್ ಹಣ<br>❖ ಪ್ಲಾಸ್ಟಿಕ್ ಹಣ | ❖ ಸಾಮಾನ್ಯ ಸಂಬಂಧ:–<br>1.ಪ್ರಾಥಮಿಕ ಸಂಬಂಧ<br>2.ಸಹಾಯಕ ಸಂಬಂಧ<br>3.ಕಾರುಬಾರಿ ಸಂಬಂಧ<br>❖ ವಿಶೇಷ ಸಂಬಂಧ:–<br>1.ಚೆಕ್ಕುಗಳಿಗೆ ಮನ್ನಣೆ<br>2.ಗ್ರಾಹಕರ ಲೆಕ್ಕಗಳ ಗೌಪ್ಯತೆ | ❖ ಕೇಂದ್ರ ಬ್ಯಾಂಕು ಅಥವಾ ರಿಜರ್ವ್ ಬ್ಯಾಂಕು<br>❖ ವಾಣಿಜ್ಯ ಬ್ಯಾಂಕುಗಳು<br>❖ ಕೈಗಾರಿಕಾ ಅಭಿವೃದ್ಧಿ ಬ್ಯಾಂಕುಗಳು<br>❖ ಭೂ ಅಭಿವೃದ್ಧಿ ಅಥವಾ ವ್ಯವಸಾಯ ಬ್ಯಾಂಕುಗಳು<br>❖ ಸ್ಥಳೀಯ ಬ್ಯಾಂಕುಗಳು<br>❖ ಸಹಕಾರಿ ಬ್ಯಾಂಕುಗಳು |

- ❖ **ವ್ಯವಸಾಯ** – ಬೆಳೆಗಳ ಪೋಷಣೆಗಾಗಿ ಭೂಮಿಯನ್ನು ಉಳುಮೆ ಮಾಡುವುದು.
- ❖ **ಸಾಂದ್ರ ಬೇಸಾಯ** – ಚಿಕ್ಕ ಭೂಹಿಡುವಳಿಯಲ್ಲಿ ಅಧಿಕ ಬಂಡವಾಳ & ಕಾರ್ಮಿಕರನ್ನು ತೊಡಗಿಸುವುದು
- ❖ **ವಾಣಿಜ್ಯ ಬೇಸಾಯ** – ವ್ಯಾಪಾರದ ಉದ್ದೇಶಕ್ಕಾಗಿ ಬೆಳೆಗಳನ್ನು ಬೆಳೆಯುವುದು
- ❖ **ಒಣ ಬೇಸಾಯ** – ಅತಿ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬೇಸಾಯ ಪದ್ಧತಿ.
- ❖ **ಆರ್ದ್ರ ಬೇಸಾಯ** – ಸಾಕಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ನೀರಾವರಿಯ ನೆರವಿಲ್ಲದೆ ಬೆಳೆಯುವುದು
- ❖ **ನೀರಾವರಿ ಬೇಸಾಯ** – ನೀರಾವರಿ ಸಹಾಯದಿಂದ ಬೆಳೆ ಬೆಳೆಯುವುದು
- ❖ **ತೋಟಗಾರಿಕಾ ಬೇಸಾಯ** – ಹಣ್ಣು, ಹೂವು ಬೆಳೆಗಳನ್ನು ತೋಟಗಳಲ್ಲಿ ಕ್ರಮಬದ್ಧವಾಗಿ ಬೆಳೆಯುವುದು
- ❖ **ನೆಡುತೋಪು ಬೇಸಾಯ** – ವಿಶಾಲವಾದ ತೋಟಗಳಲ್ಲಿ ಒಂದು ಬೆಳೆಯನ್ನು ಬೆಳೆಯುವುದು.
- ❖ **ಮಿಶ್ರಣ ಬೇಸಾಯ** – ಬೆಳೆಗಳ ಸಾಗುವಳಿ ಮತ್ತು ಪಶುಪಾಲನೆ ಜೊತೆ ಜೊತೆಯಾಗಿ ಮಾಡುವುದು

- ❖ **ಪುಷ್ಪ ಕೃಷಿ** – ಮಾರಾಟಕ್ಕಾಗಿ ಹೂವುಗಳನ್ನು ಸಾಗುವಳಿ ಮಾಡುವ ಕಲೆ.
- ❖ **ಬೆಳೆ ಋತು** – ಕೃಷಿ ಪ್ರದೇಶವೊಂದರಲ್ಲಿ ವಿವಿಧ ಬೆಳೆಗಳನ್ನು ಸಾಗುವಳಿ ಮಾಡುವ ನಿರ್ದಿಷ್ಟ ಅವಧಿ.
- ❖ **ಮುಂಗಾರು ಬೆಳೆ ಋತು** – ನೈಋತ್ಯ ಮಾನ್ಸೂನ್ ಅವಧಿಯ ಕೃಷಿ.
- ❖ **ಹಿಂಗಾರು ಬೆಳೆ ಋತು** – ಈಶಾನ್ಯ ಮಾನ್ಸೂನ್ ಅವಧಿಯ ಕೃಷಿ.
- ❖ **ಜೈಡ್ ಬೆಳೆ ಋತು** – ಮುಂಗಾರು ಮತ್ತು ಹಿಂಗಾರು ಬೆಳೆ ಋತುಗಳ ನಡುವಣ ಬೆಳೆಗಳ ಅವಧಿ.
- ❖ **ಕೈಗಾರಿಕೆ** – ಕಚ್ಚಾ ವಸ್ತುಗಳನ್ನು ಹೆಚ್ಚು ಉಪಯುಕ್ತ ವಸ್ತುಗಳಾಗಿ ಪರಿವರ್ತಿಸುವ ಪ್ರಕ್ರಿಯೆ.
- ❖ **ಕೈಗಾರಿಕಾ ಪ್ರದೇಶ** – ವಿವಿಧ ಬಗೆಯ ಕೈಗಾರಿಕೆಗಳು ಅಧಿಕ ಸಂಖ್ಯೆಯಲ್ಲಿ ಕೇಂದ್ರೀಕೃತಗೊಂಡ ಪ್ರದೇಶ.
- ❖ **ಜನಸಂಖ್ಯೆ** – ನಿಗದಿತದ ಪ್ರದೇಶವೊಂದರಲ್ಲಿ ವಾಸಿಸುವ ಜನರ ಒಟ್ಟು ಸಂಖ್ಯೆ.
- ❖ **ಜನಸಾಂದ್ರತೆ** – ಪ್ರತಿ ಚದರ ಕಿಲೋಮೀಟರ್ ನಲ್ಲಿ ವಾಸಿಸುವ ಜನರ ಸಂಖ್ಯೆ.

# ಘಟಕ ಗಾಂಧಿಯುಗ ಮತ್ತು ರಾಷ್ಟ್ರೀಯ ಹೋರಾಟ (ನಿರೀಕ್ಷಿತ ಅಂಕಗಳು 4)

### 1. ಸುಭಾಷ್ ಚಂದ್ರ ಬೋಸ್

- ❖ ಗಾಂಧೀಜಿಯೊಂದಿಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದರು.
- ❖ ಭಿನ್ನಾಭಿಪ್ರಾಯದಿಂದಾಗಿ ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿದರು.
- ❖ ಫಾರ್ವರ್ಡ್ ಬ್ಲಾಕ್ ಪಕ್ಷ ಸ್ಥಾಪಿಸಿದ್ದರು.
- ❖ ವಿದೇಶದಲ್ಲಿದ್ದ ಭಾರತೀಯರನ್ನು ಸಂಘಟಿಸಿದರು.
- ❖ ಐ.ಎನ್.ಎ ಸೈನ್ಯವನ್ನು ಸಂಘಟಿಸಿದರು.
- ❖ 'ದೆಹಲಿ ಚಲೋ' ಎಂದು ಕರೆ ನೀಡಿದರು.
- ❖ ವಿಮಾನ ಅಪಘಾತದಲ್ಲಿ ಸಾವನ್ನಪ್ಪಿದರು
- ❖ ಮುಂದೆ ಐ.ಎನ್.ಎ. ಸೈನ್ಯ ಬ್ರಿಟಿಷರಿಗೆ ಸೋತಿತು.

### 2. ಜವಹರ್ ಲಾಲ್ ನೆಹರು

- ❖ ಭಾರತದ ಪ್ರಥಮ ಪ್ರಧಾನಮಂತ್ರಿಯಾಗಿದ್ದಾರೆ.
- ❖ ಸಂಸ್ಥಾನಗಳನ್ನು ವಿಲೀನಗೊಳಿಸಿದರು.
- ❖ ಭಾರತ ವಿದೇಶಾಂಗ ನೀತಿಯನ್ನು ರೂಪಿಸಿದರು.
- ❖ ಪಂಚವಾರ್ಷಿಕ ಯೋಜನೆ ಜಾರಿಗೊಳಿಸಿದರು.
- ❖ ನೀರಾವರಿ ಯೋಜನೆಗಳನ್ನು ಜಾರಿಗೆ ತಂದರು.
- ❖ ಮಿಶ್ರ ಆರ್ಥಿಕತೆಗೆ ಬುನಾದಿ ಹಾಕಿದರು.
- ❖ ಗ್ರಾಮೀಣಾಭಿವೃದ್ಧಿ ಯೋಜನೆಗಳನ್ನು ತಂದರು.
- ❖ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿದರು.

### 3. ಡಾ. ಬಿ.ಆರ್ ಅಂಬೇಡ್ಕರ್

- ❖ ಭಾರತದ 'ಆಧುನಿಕಮನು' ಎಂದು ಹೆಸರಾಗಿದ್ದಾರೆ.
- ❖ ಮಹರ್ & ಕಾಲಾರಾಂ ಚಳುವಳಿ ರೂಪಿಸಿದರು.
- ❖ 'ಬಹಿಷ್ಕೃತ ಭಾರತ' ಸಂಘಟನೆ ಸ್ಥಾಪಿಸಿದರು.
- ❖ 'ಸ್ವತಂತ್ರ ಕಾರ್ಮಿಕ ಪಕ್ಷ'ವನ್ನು ಸ್ಥಾಪಿಸಿದರು.
- ❖ ಮೂಕನಾಯಕ ಎಂಬ ಪತ್ರಿಕೆ ಆರಂಭಿಸಿದರು.
- ❖ ಸಂವಿಧಾನದ ಕರಡು ಸಮಿತಿಯ ಅಧ್ಯಕ್ಷರಾಗಿದ್ದರು.
- ❖ ಶೋಷಿತರಿಗೆ ಮೀಸಲಾತಿಯನ್ನು ಕಲ್ಪಿಸಿದರು.
- ❖ 'ಭಾರತ ರತ್ನ' ಪ್ರಶಸ್ತಿಯನ್ನು ನೀಡಲಾಗಿದೆ.

### 4. ಅಸಹಕಾರ ಚಳುವಳಿ

- ❖ 1920ರಲ್ಲಿ ಗಾಂಧೀಜಿ ಅಸಹಕಾರ ಚಳುವಳಿಗೆ ಕರೆಕೊಟ್ಟರು.
- ❖ ದೇಶಾದ್ಯಂತ ವ್ಯಾಪಾಕ ಬೆಂಬಲ ದೊರೆಯಿತು.
- ❖ ಅನೇಕ ವಕೀಲರು ತಮ್ಮ ವಕೀಲ ವೃತ್ತಿಯನ್ನು ಬಿಟ್ಟರು.
- ❖ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳನ್ನು ತೊರೆದರು.
- ❖ ಪ್ರಾಂತ್ಯಗಳಿಗೆ ನಡೆದ ಚುನಾವಣೆಯನ್ನು ಬಹಿಷ್ಕರಿಸಲಾಯಿತು.
- ❖ ರಾಷ್ಟ್ರೀಯ ವಿದ್ಯಾಲಯಗಳನ್ನು ಸ್ಥಾಪಿಸಲಾಯಿತು.
- ❖ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಲಾಯಿತು.
- ❖ ಚೌರಿ ಚೌರ ಘಟನೆಯಿಂದ ಅಸಹಕಾರ ಚಳವಳಿ ಹಿಂಪಡೆದರು.

### 5. ಸಂತಾಲರ ಬುಡಕಟ್ಟು ದಂಗೆ

- ❖ ಬ್ರಿಟಿಷರ ಕಂದಾಯ&ಅರಣ್ಯ ನೀತಿಯ ವಿರುದ್ಧ ದಂಗೆಯೆದ್ದರು.
- ❖ ಇವುಗಳಲ್ಲಿ ಸಂತಾಲ, ಮುಂಡ ದಂಗೆ ಪ್ರಮುಖವಾದವು.
- ❖ ಸಂತಾಲರು ಒರಿಸ್ಸಾ, ಬಂಗಾಳದಲ್ಲಿ ಹಂಚಿಕೆಯಾಗಿದ್ದರು.
- ❖ ಸಂತಾಲರು ಭೂಮಿಯನ್ನು ಕಳೆದುಕೊಂಡು ಬಂಡೆದ್ದರು.
- ❖ ಈ ದಂಗೆಯು ಬಾಗತ್‌ಪುರ & ರಾಜ್‌ಮಹಲ್‌ಗಳಲ್ಲಿ ಹೆಚ್ಚಾಗಿತ್ತು.
- ❖ ಬ್ರಿಟಿಷರು ಮತ್ತು ಜಮೀನ್ದಾರರು ಪಲಾಯನಗೈದರು.
- ❖ ಬ್ರಿಟಿಷರು ಸೈನ್ಯದಿಂದ ಈ ದಂಗೆಯನ್ನು ಹತ್ತಿಕ್ಕಿದರು.
- ❖ ಈ ದಂಗೆಯು ಮುಂದಿನ ಹೋರಾಟಗಳಿಗೆ ಪ್ರೇರಣೆಯಾಯಿತು.

### 6. ರೈತ ಮತ್ತು ಕಾರ್ಮಿಕರ ಪ್ರತಿಭಟನೆ

- ❖ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪ್ರಮುಖ ಪಾತ್ರವಹಿಸಿವೆ.
- ❖ ಕಾಂಗ್ರೆಸ್, ಮಾರ್ಕ್ಸ್‌ವಾದದಿಂದ ಪ್ರಭಾವಿತವಾಗಿವೆ.
- ❖ ಚಂಪಾರಣ್ಯದಲ್ಲಿ ನೀಲಿ ಬೆಳೆಯುವುದನ್ನು ವಿರೋಧಿಸಿದರು.
- ❖ ಭೂಕಂದಾಯದ ವಿರುದ್ಧ ಹರತಾಳ ನಡೆಸಿದರು.
- ❖ ಗಾಂಧೀಜಿ ಅಧಿಕಾರಗಳ ಮನವೊಲಿಸಿ ತೆರಿಗೆ ರದ್ದುಗೊಳಿಸಿದರು.
- ❖ ಚಂಪಾರಣ್ಯ, ಖೇಡ ಹೋರಾಟದಲ್ಲಿ ಗಾಂಧೀಜಿ ಪ್ರಭಾವವಿತ್ತು.
- ❖ ರೈತರು ಬ್ರಿಟಿಷರು ಮತ್ತು ಜಮೀನ್ದಾರರ ವಿರುದ್ಧ ದಂಗೆಯೆದ್ದರು.
- ❖ ಸ್ವಾತಂತ್ರ್ಯ ಚಳುವಳಿಯೊಂದಿಗೆ ರೈತರ ಸಮಸ್ಯೆಗಳು ಬೆರೆತವು.

### 7. ಕ್ವಿಟ್ ಇಂಡಿಯಾ ಚಳುವಳಿ

- ❖ ಗಾಂಧೀಜಿ 1942ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆಯಿತ್ತರು
- ❖ 'ಬ್ರಿಟಿಷರೇ ಭಾರತ ಬಿಟ್ಟ ತೊಲಗಿ, ಇದರ ಆಶಯವಾಗಿತ್ತು.
- ❖ ಗಾಂಧೀಜಿ 'ಮಾಡು ಇಲ್ಲವೇ ಮಡಿ' ಎನ್ನುವ ಕರೆ ಕೊಟ್ಟರು.
- ❖ ಬ್ರಿಟಿಷರು ರಾಷ್ಟ್ರೀಯ ನಾಯಕರನ್ನು ಬಂಧಿಸಿದರು.
- ❖ ಜಯಪ್ರಕಾಶ ನಾರಾಯಣ್ ಹೋರಾಟದ ನೇತೃತ್ವ ವಹಿಸಿದರು.
- ❖ ಅನೇಕ ರಾಜರು ಬ್ರಿಟಿಷರ ಪರವಾಗಿ ಕೆಲಸ ಮಾಡಿದರು.
- ❖ ಮುಸ್ಲಿಂಲೀಗ್ ಈ ಚಳುವಳಿಯಿಂದ ದೂರವಿತ್ತು.
- ❖ ಬ್ರಿಟಿಷರು ಈ ಚಳುವಳಿಯನ್ನು ಹತ್ತಿಕ್ಕಿದರು.

---

- ❖ **ಮಂದಗಾಮಿಗಳು** – ಸಾಂವಿಧಾನಿಕ ಚೌಕಟ್ಟಿನೊಳಗೆ ಪ್ರಾರ್ಥನೆ ಮತ್ತು ಮನವಿಗಳ ಮೂಲಕ ತಮ್ಮ ಬೇಡಿಕೆಗಳನ್ನು ಸರ್ಕಾರದ ಮುಂದಿಡುತ್ತಿದ್ದವರು.
- ❖ **ತೀವ್ರವಾದಿಗಳು** – ಮಂದಗಾಮಿಗಳ ಮೃದುಧೋರಣೆಯನ್ನು ಟೀಕೆ ಮಾಡುತ್ತಾ, ತೀವ್ರವಾದ ನಿಲುವುಗಳನ್ನು ಪ್ರತಿಪಾದಿಸುತ್ತಾ ಬಂದ ಬಣ.
- ❖ **ಆವರ್ತ ಮಾರುತ** – ಕಡಿಮೆ ಒತ್ತಡವುಳ್ಳ ಕೇಂದ್ರದ ಕಡೆಗೆ ಮಾರುತಗಳು ಚಕ್ರಾಕಾರದಲ್ಲಿ ಚಲಿಸುವುದು.
- ❖ **ಪ್ರವಾಹ** – ಕೆಲವೊಮ್ಮೆ ನದಿಗಳು ತಮ್ಮ ದಂಡೆಗಳಾಚೆಗೂ ಉಕ್ಕಿ ಹರಿದಾಗ ಪಕ್ಕದ ಭಾಗಗಳು ಜಲಾವೃತಗೊಳ್ಳುವುದು.
- ❖ **ಭೂಕುಸಿತ** – ಭೂರಾಶಿಗಳು ಬೆಟ್ಟ ಅಥವಾ ಪರ್ವತಗಳ ಕಡಿದಾದ ಇಳಿಜಾರಿನಲ್ಲಿ ಕೆಳಗೆ ಚಲಿಸುವುದು.
- ❖ **ಸಮುದ್ರದ ಕೊರೆತ** – ಸಮುದ್ರ ಅಲೆಗಳ ಅವಿರತ ಸಂಘರ್ಷಣಾ ಪ್ರಕ್ರಿಯೆಯಿಂದ ತೀರವು ಸವೆಯುವ ಮತ್ತು ವಸ್ತುಗಳ ಒಯ್ಯುವಿಕೆ.
- ❖ **ತಲಾದಾಯ** – ರಾಷ್ಟ್ರೀಯ ವರಮಾನವನ್ನು ಒಟ್ಟು ಜನಸಂಖ್ಯೆಯಿಂದ ಭಾಗಿಸಿದಾಗ ಲಭ್ಯವಾಗುವುದು.
- ❖ **ಬಾಲಕಾರ್ಮಿಕ** – ಶಾಲೆಯಿಂದ ಹೊರಗಿರುವ 14 ವರ್ಷದೊಳಗಿನ ಮಕ್ಕಳು.
- ❖ **ಸಾಮಾಜಿಕ ಭದ್ರತೆ** – ಮಾನವನಿಗೆ ಬದುಕಲು ಅಗತ್ಯವಾಗಿ ಬೇಕಾದ ಮೂಲ ಸೌಲಭ್ಯಗಳನ್ನು ಸಾರ್ವಜನಿಕವಾಗಿ ಒದಗಿಸಿಕೊಡುವುದು.
- ❖ **ಸಾಮಾಜಿಕ ಚಳವಳಿ** – ಮಾನವ ಸಮಾಜದ ಬದಲಾವಣೆಗಳಿಗೆ ಸಂಬಂಧಿಸಿದಂತೆ ನಡೆಯುವ ಒಂದು ವ್ಯವಸ್ಥಿತ ಸ್ವಾಭಾವಿಕ ಪ್ರತಿರೋಧದ ಸಾಮಾಜಿಕ ಪ್ರತಿಕ್ರಿಯೆ.
- ❖ **ಜನಮಂದೆ** – ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿ.
- ❖ **ದೊಂಬಿ(ಗಲಭೆ)** – ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆ.
- ❖ **ಪರಿಸರ ಚಳುವಳಿ** – ಪರಿಸರದಲ್ಲಿರುವ ಜೀವ ಜಗತ್ತಿನ ಸಂರಕ್ಷಣೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಚಳವಳಿ.
- ❖ **ಕಾರ್ಮಿಕ ಚಳವಳಿ** – ಕಾರ್ಮಿಕ ಮತ್ತು ಉದ್ಯೋಗ ಕಾನೂನುಗಳ ಅನುಷ್ಠಾನಕ್ಕೆ ಸರ್ಕಾರಗಳನ್ನು ಒತ್ತಾಯಿಸಿ ಕಾರ್ಮಿಕ ಸಂಘಟನೆಗಳ ಮೂಲಕ ನಡೆಯುವ ಚಳವಳಿ.
- ❖ **ಮಹಿಳಾ ಚಳವಳಿ** – ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ಮಹಿಳೆಯರು ನಡೆಸಿದ ಪ್ರತಿಭಟನೆ.

Use E-Papers, Save Tress
Above line hide when print out

## ವ್ಯತ್ಯಾಸಗಳು(ಭಿನ್ನವಾಗಿವೆ ಹೇಗೆ?) (ನಿರೀಕ್ಷಿತ ಅಂಕಗಳು 2ರಿಂದ 4)

### ಪೂರ್ವಘಟ್ಟ
- ಎತ್ತರವಾಗಿಲ್ಲ
- ನಿರಂತರವಾಗಿಲ್ಲ
- ಪೂರ್ವ ಕರಾವಳಿಗೆ ಹೊಂದಿಕೊಂಡಿದೆ

### ಪಶ್ಚಿಮ ಘಟ್ಟ
- ಎತ್ತರವಾಗಿದೆ
- ನಿರಂತರವಾಗಿವೆ
- ಪಶ್ಚಿಮ ಕರಾವಳಿಗೆ ಹೊಂದಿಕೊಂಡಿದೆ

### ಪೂರ್ವ ಕರಾವಳಿ
- ಸುವರ್ಣರೇಖಾನದಿಯಿಂದ ಕನ್ಯಾಕುಮಾರಿವರೆಗಿದೆ
- ಅಗಲ ಮತ್ತು ಸಮತಟ್ಟಾಗಿದೆ
- ಸರ್ಕಾರ್ ತೀರ & ಕೋರಮಂಡಲ ತೀರಗಳಿವೆ

### ಪಶ್ಚಿಮ ಕರಾವಳಿ
- ಕಛ್‌ನಿಂದ ಕನ್ಯಾಕುಮಾರಿವರೆಗೆ ವಿಸ್ತರಿಸಿದೆ
- ಕಿರಿದಾಗಿದ್ದು, ಕಡಿದಾದ ಇಳಿಜಾರಿದೆ
- ಕೊಂಕಣ, ಕರ್ನಾಟಕ, ಮಲಬಾರ್ ತೀರಗಳಿವೆ

### ಅಂಡಮಾನ್ & ನಿಕೋಬಾರ್ ದ್ವೀಪಗಳು
- ಜ್ವಾಲಾಮುಖಿ ನಿರ್ಮಿತ ದ್ವೀಪಗಳು
- 204 ದ್ವೀಪಗಳಿವೆ
- ಬಂಗಾಳಕೊಲ್ಲಿಯಲ್ಲಿವೆ

### ಲಕ್ಷದ್ವೀಪಗಳು
- ಹವಳದ ದ್ವೀಪಗಳು
- 43 ದ್ವೀಪಗಳಿವೆ
- ಅರಬ್ಬಿ ಸಮುದ್ರದಲ್ಲಿವೆ

### ಸಂಘಟಿತ ವಲಯ
- ಕಾನೂನಿನ ನಿಯಂತ್ರಣವಿದೆ
- ನಿಗದಿತ ಕೆಲಸವಿದೆ
- ಉದ್ಯೋಗದ ಭದ್ರತೆಯಿದೆ

### ಅಸಂಘಟಿತ ವಲಯ
- ಕಾನೂನಿನ ನಿಯಂತ್ರಣವಿಲ್ಲ
- ವಿವಿಧ ಕೆಲಸಗಳಿಲ್ಲ
- ಉದ್ಯೋಗದ ಭದ್ರತೆಯಿಲ್ಲ

### ಉಳಿತಾಯ ಖಾತೆ
- ವೇತನ ಪಡೆಯುವವರು ತೆರೆಯುತ್ತಾರೆ
- ಚೆಕ್ಕು, ಚೀಟಿಗಳಿಂದ ಹಣ ಪಡೆಯಬಹುದು
- ಠೇವಣಿಗಳಿಗೆ ಬಡ್ಡಿಯನ್ನು ನೀಡಲಾಗುತ್ತದೆ

### ಚಾಲ್ತಿ ಖಾತೆ
- ವ್ಯಾಪಾರಸ್ಥರು ತೆರೆಯುತ್ತಾರೆ
- ಬೇಡಿಕೆ ಠೇವಣಿಗಳಿಂದ ಹಣ ಪಡೆಯಬಹುದು
- ಠೇವಣಿಗಳಿಗೆ ಬಡ್ಡಿಯನ್ನು ನೀಡುವುದಿಲ್ಲ

### ಪ್ರತ್ಯಕ್ಷ ತೆರಿಗೆ
- ವರ್ಗಾಯಿಸಲು ಸಾಧ್ಯವಿಲ್ಲ
- ವರಮಾನ, ಸಂಪತ್ತಿನ ಮೇಲೆ ವಿಧಿಸಲಾಗುತ್ತದೆ
- ಉದಾ: ವರಮಾನ ತೆರಿಗೆ, ಸಂಪತ್ತಿನ ತೆರಿಗೆ

### ಪರೋಕ್ಷ ತೆರಿಗೆ
- ವರ್ಗಾಯಿಸಬಹುದು.
- ಸರಕು & ಸೇವೆಗಳ ಮೇಲೆ ವಿಧಿಸಲಾಗುತ್ತದೆ
- ಉದಾ: ಅಬಕಾರಿ ತೆರಿಗೆ, ಸೇವಾ ತೆರಿಗೆ

### ಜಮೀನ್ದಾರಿ ಪದ್ಧತಿ
- ಕಾರ್ನ್ ವಾಲೀಸ್ ಜಾರಿಗೆ ತಂದನು.
- ಜಮೀನ್ದಾರ ಭೂಮಾಲೀಕನಾಗಿದ್ದನು.
- ಜಮೀನ್ದಾರರಿಂದ ಕಂದಾಯ ವಸೂಲಿ

### ರೈತವಾರಿ ಪದ್ಧತಿ
- ಅಲೆಕ್ಸಾಂಡರ್ ರೀಡ್ ಜಾರಿಗೆ ತಂದನು.
- ರೈತರೇ ಭೂಮಾಲೀಕರಾಗಿದ್ದರು.
- ರೈತರಿಂದ ನೇರವಾಗಿ ತೆರಿಗೆ ಪಾವತಿ

### ಪ್ರಮುಖ ಕಾಯ್ದೆಗಳು
- 1955ರ ಅಸ್ಪೃಶ್ಯತಾ ಅಪರಾಧಗಳ ಕಾಯ್ದೆ – ಅಸ್ಪೃಶ್ಯತಾ ಆಚರಣೆಯ ನಿವಾರಣೆ.
- 1956ರ ರಾಜ್ಯ ಪುನರ್ವಿಂಡನಾ ಕಾಯ್ದೆ – ಭಾರತದಲ್ಲಿ ಭಾಷಾವಾರು ರಾಜ್ಯಗಳ ರಚನೆಗೆ ಅವಕಾಶ.
- 1986ರ ಬಾಲಕಾರ್ಮಿಕ ಪದ್ಧತಿ ನಿಷೇಧ ಮತ್ತು ನಿಯಂತ್ರಣ ಕಾಯ್ದೆ(ತಿದ್ದುಪಡಿ2006) – ಬಾಲ ಕಾರ್ಮಿಕರನ್ನು ನೇಮಿಸಿಕೊಂಡವರಿಗೆ 2 ವರ್ಷದ ತನಕ ಜೈಲು ಮತ್ತು ರೂ. 50,000/– ತನಕ ದಂಡ ವಿಧಿಸಲಾಗುತ್ತದೆ.
- 2006ರ ಬಾಲ್ಯವಿವಾಹ ನಿಷೇಧ ಕಾಯ್ದೆ – ಉಲ್ಲಂಘಿಸಿದವರಿಗೆ 2 ವರ್ಷ ಜೈಲು ಹಾಗೂ 1 ಲಕ್ಷ ದಂಡ.
- 2012ರ ಪೋಕ್ಸೋ ಕಾಯ್ದೆ – ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯವನ್ನು ತಡೆಯುವುದು.

- ವಿಶ್ವಸಂಸ್ಥೆಯ ಕೇಂದ್ರ ಕಛೇರಿ– ನ್ಯೂಯಾರ್ಕ್
- ಅಂತರರಾಷ್ಟ್ರಿಯ ನ್ಯಾಯಾಲಯ–ನೆದರ್ ಲ್ಯಾಂಡಿನ ಹೇಗ್
- ಆಹಾರ ಮತ್ತು ಕೃಷಿ ಸಂಸ್ಥೆ– ರೋಮ್
- ವಿಶ್ವ ಆರೋಗ್ಯ ಸಂಸ್ಥೆ, ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ವಿಶ್ವ ವ್ಯಾಪಾರ ಸಂಸ್ಥೆ– ಜಿನೇವಾ
- ಸಾರ್ಕ್ ನ ಕೇಂದ್ರ ಕಛೇರಿ–ಕಠ್ಮಂಡು
- ಅಧಿಕ ಜನಸಾಂದ್ರತೆ ಹೊಂದಿರುವ ರಾಜ್ಯ– ಬಿಹಾರ
- ಕಡಿಮೆ ಜನಸಾಂದ್ರತೆ ಹೊಂದಿರುವ ರಾಜ್ಯ– ಅರುಣಾಚಲ ಪ್ರದೇಶ
- ಈಶಾನ್ಯ ಮಾರುತಗಳ ಸಮಯದಲ್ಲಿ ಮಳೆ ಪಡೆಯುವ ರಾಜ್ಯಗಳು – ಆಂಧ್ರ, ತಮಿಳುನಾಡು, ಒರಿಸ್ಸಾ
- ಭಾರತದ ಮ್ಯಾಂಚೆಸ್ಟರ್ – ಮುಂಬಯಿ (ಅತಿಹೆಚ್ಚು ಹತ್ತಿ ಬಟ್ಟೆ ಕೈಗಾರಿಕೆಗಳಿವೆ)
- ಭಾರತದ ಸಿಲಿಕಾನ್ ಸಿಟಿ – ಬೆಂಗಳೂರು (ಅತಿಹೆಚ್ಚು ಮಾಹಿತಿ ತಂತ್ರಜ್ಞಾನದ ಕೈಗಾರಿಕೆಗಳಿವೆ)
- ಭಾರತದ ಹೆಬ್ಬಾಗಿಲು – ಮುಂಬಯಿ
- ಅರಬ್ಬಿ ಸಮುದ್ರದ ರಾಣಿ – ಕೊಚ್ಚಿ

- "ಆಧುನಿಕ ಭಾರತದ ಹರಿಕಾರ, ಭಾರತದ ಪುನರುಜ್ಜೀವನದ ಜನಕ ಮತ್ತು ಭಾರತೀಯ ರಾಷ್ಟ್ರೀಯತೆಯ ಪ್ರವಾದಿ" – ರಾಜಾ ರಾಮಮೋಹನರಾಯ (ರಾಜಾ ರಾಮಮೋಹನ್ ರಾಯರು ಮತ್ತು ಬ್ರಹ್ಮಸಮಾಜವು ಮಾಡಿದ ಸೇವೆಯನ್ನು ವಿಶ್ಲೇಷಿಸಿ ರವೀಂದ್ರನಾಥ ಠಾಗೂರರು ಹೀಗೆ ಕರೆದಿದ್ದಾರೆ)
- "ಶ್ವೇತ ಸರಸ್ವತಿ" – ಅನಿಬೆಸೆಂಟ್ ('ಭಗವದ್ಗೀತೆ'ಯನ್ನು ಇಂಗ್ಲಿಷಿಗೆ ಅನುವಾದ ಮಾಡಿದ್ದರಿಂದ)
- ಭಾರತದ ವಿದೇಶಾಂಗ ನೀತಿಯ ಶಿಲ್ಪಿ, ನೆಹರು ವಿದೇಶಾಂಗ ನೀತಿ – ಜವಾಹರಲಾಲ್ ನೆಹರು (ಭಾರತದ ವಿದೇಶಾಂಗ ನೀತಿಯನ್ನು ನೆಹರು ರೂಪಿಸಿದ್ದರಿಂದ)
- "ಸಂವಿಧಾನ ಶಿಲ್ಪಿ" – ಡಾ॥ ಬಿ. ಆರ್. ಅಂಬೇಡ್ಕರ್ (ಸಂವಿಧಾನ ಕರಡು ರಚನೆಯಲ್ಲಿ ನಿರ್ಣಾಯಕವಾದ ಹಾಗೂ ಮಹತ್ವದ ಪಾತ್ರವನ್ನು ನಿರ್ವಹಿಸಿದ್ದರಿಂದ)

### ಹೇಳಿಕೆಗಳು
- ಕಾಲ ಬದಲಾದಂತೆ ಧರ್ಮವನ್ನು ಅರ್ಥೈಸಿಕೊಳ್ಳುವ ಮತ್ತು ಪರಿಭಾವಿಸುವ ರೀತಿಯೂ ಬದಲಾಗಬೇಕು, ಇಲ್ಲದಿದ್ದರೆ ಧರ್ಮವೆಂಬುದು ಜಡವಾಗುತ್ತದೆ". – ಸರ್ ಸಯ್ಯದ್ ಅಹಮದ್ ಖಾನ್
- "ಸ್ವರಾಜ್ಯವು ನನ್ನ ಜನ್ಮ ಸಿದ್ಧ ಹಕ್ಕು; ಅದನ್ನು ಪಡೆದೇ ತೀರುವೆ" – ಬಾಲಗಂಗಾಧರ್ ತಿಲಕ್
- "ಅಸ್ಪೃಶ್ಯತೆ ಜಾತಿಯ ಅತ್ಯಂತ ತಿರಸ್ಕಾರಾರ್ಹವಾದ ಅಭಿವ್ಯಕ್ತಿ. ಇದು ಹಿಂದೂ ಸಮಾಜದ ಶರೀರವನ್ನು ಕುಷ್ಠ ರೋಗದ ಹುಣ್ಣಿನಂತೆ ಪೀಡಿಸುತ್ತದೆ". – ಗಾಂಧೀಜಿ
- "ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ". – ಗಾಂಧೀಜಿ

Use E-Papers, Save Tress
Above line hide when print out

## ನಕ್ಷೆ (ನಿರೀಕ್ಷಿತ ಅಂಕಗಳು 4)










